ಅಧ್ಯಕ್ಷರು : ಶ್ರೀ ಗುರುಪಾದಪ್ಪನವರು, ಹಾಗೂ ಸಂಸದೀಯ ವ್ಯವಹಾರಗಳು ಸಚಿವರು ಸ್ವಲ್ಪ ಗಮನಹರಿಸಬೇಕು. ಮಾನ್ಯ ಸದಸ್ಯರುಗಳು ಯಾವ ಯಾವ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದು ಅದಕ್ಕೆ ಉತ್ತರ ಸಿಕ್ಕಿಲ್ಲ ಅಂತಹವುಗಳಲ್ಲಿ ಕೆಲವು ಪ್ರಶ್ನೆಗಳಿಗೆಲ್ಲಾ ತಾವು ಲಿಖಿತ ಉತ್ತರ ಕಳುಹಿಸಿಕೊಟ್ಟರೆ ಸಾಕು. ಯಾವುದು ಬಹಳ ಪ್ರಮುಖವಾಗಿರತಕ್ಕಂಥದ್ದು ಇದೆ ಅದನ್ನು ಇಲ್ಲಿಯೇ ಸದನದಲ್ಲಿ ನಾಳೆ ಸದನದ ಕಾರ್ಯಕಲಾಪ ಮುಗಿಯುವುದರೊಳಗಾಗಿ ಉತ್ತರವನ್ನು ಮಂಡಿಸಿಬಿಟ್ಟರೆ ಚೆನ್ನಾಗಿರುತ್ತದೆ. ಈಗ ಮಾನ್ಯ ಏರ್ಗೆಯವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ಅನುಮತಿ ಕೇಳಿಕೊಂಡಿದ್ದಾರೆ. ಅದು ಆದ ನಂತರ ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳೋಣ.....

(೫೦) ಗ್ರಾನೈಟ್ ಬಗ್ಗೆ ಜಂಟಿ ಸಮಿತಿ ವರದಿ ನೀಡಿರುವುದು

ಶ್ರೀ ಎಂ. ಮಲ್ಲಿಕಾರ್ಜುನ ಏರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಈ ಶೂನ್ಯ ವೇಳೆಯಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು, ಅದಕ್ಕೆ ತಮ್ಮ ಅಪ್ಪಣೆಯನ್ನು ಪಡೆದುಕೊಂಡಿರುತ್ತೇನೆ. ನಾನು ನಿಲುವಳಿ ಸೂಚನೆಯನ್ನು ತರಬೇಕೆನ್ನುವ ವಿಚಾರವನ್ನು ಇಟ್ಟುಕೊಂಡಿದ್ದೆ. ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡತಕ್ಕಂಥ ಅನೇಕ ಮಿತ್ರರು ಇದ್ದ ಕಾರಣ ಆ ವೇಳೆಯನ್ನು ಕಳೆಯಬಾರದೆಂದು ನೀವು ಸಮಯವನ್ನು ನಿಗದಿ ಮಾಡಿದ ಮೇಲೆ ನಾವು ಚರ್ಚೆ ಮಾಡಬೇಕೆನ್ನುವ ಉದ್ದೇಶದಿಂದ ಸದ್ಯಕ್ಕೆ ಈ ನಿಲುವಳಿ ಸೂಚನೆಯನ್ನು ತರುವುದನ್ನು ಕೈಬಿಟ್ಟಿದ್ದೇನೆ.ಅದರಿಂದ ನಾನು ಈಗ ಶೂನ್ಯ ವೇಳೆಯಲ್ಲಿ ಒಂದು ಪ್ರಮುಖವಾದಂಥ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಇದು 30ನೇ ಅಕ್ಟೋಬರ್ 1996ರಲ್ಲಿ ಜಂಟಿ ಸಮಿತಿ was constituted to enquire into the granite issue in the State and to report to the House. 22-7-1995ರ ಡಿಸ್‌ಕಷನ್‌ನ ಆಧಾರದ ಮೇಲೆ ಸರ್ಕಾರ 31–8-1995ರಲ್ಲಿ ಜಂಟಿ ಸದನ ಸಮಿತಿ ಕಾನ್ಷ್ಟಿಟ್ಯೂಟ್ ಮಾಡಿ ಅದಕ್ಕೆ 6 ಟರ್ಮ್ಸ್ ಆಫ್ ರೆಫರೆನ್ಸ್‌ನ್ನು ಕೊಟ್ಟಿದ್ದೀರಿ.

1) About the persons/Organisations involved in illegal quarrying and 21 such and other persons.

2) About the Transportation of Ornamental Granite Blocks and other various types of Granites using fake transport permits and the action taken by the concerned Departments in relation thereto.

3) Circular dated 22-7-95 issued by the Director of Mines and Geology and the circumstances behind issue of the said circular.

4) Details about oral orders received from the office of the Hon'ble Minister for Mines & Geology.

5) Procedure being following for grant of quarry lease/licence for ornamental granites and the policy in this regard.

6) To obtain details of records relating to issues referred to C.O.D. for investigation.

ಈ 6 ಟರ್ಮ್ಸ್ ಆಫ್ ರೆಫರೆನ್ಸ್ ಮೇಲೆ ಒಂದು ಸಮಿತಿ ವಿಚಾರ ಮಾಡಿ ತನ್ನ ವರದಿಯನ್ನು 30ನೇ ಅಕ್ಟೋಬರ್ 1996ಕ್ಕೆ ಸಲ್ಲಿಸಿದೆ. ಹಾಗೆ ಸಲ್ಲಿಸಿರತಕ್ಕಂಥ ವರದಿಯಲ್ಲಿ ಈಗಾಗಲೇ ತಾವು ತಮ್ಮ...

ಅಧ್ಯಕ್ಷರು : ಈಗ ಈ ರೀತಿ ಮಾಡಿಕೊಳ್ಳೋಣ. ತಾವು ನನ್ನ ಹತ್ತಿರ ಮಾತನಾಡಿದ್ದೀರಿ. ಪ್ರಸ್ತಾಪ ಮಾಡಿದಿರಿ. Now I am thankful to you. ಸಮಯ ವ್ಯಯವಾಗುತ್ತದೆ ಎನ್ನುವ ಉದ್ದೇಶದಿಂದ ನಿಲುವಳಿ ಸೂಚನೆ ಬೇಡವೆಂದು ನಾನು ಕೇಳಿಕೊಂಡ ತಕ್ಷಣ ಅದಕ್ಕೆ ತಾವು ಒಪ್ಪಿಕೊಂಡಿದ್ದೀರಿ. ವಿಧಾನಪರಿಷತ್ತಿನಲ್ಲಿ ಈಗಾಗಲೇ ಈ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ನಾವು ಚರ್ಚೆಯನ್ನು ಮಾಡುವುದಾದರೆ ಅದು ಬಹಳ ಮುಖ್ಯವಾದ ವಿಚಾರ. ಅದು ನಿಮ್ಮಮೇಲೆ It causes reflection. You are right in taking up this discussion. I am only worried, ಏಕೆಂದರೆ ಇದನ್ನೂ ಯಾವ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳಬಹುದು ಎನ್ನುವುದು, ಏಕೆಂದರೆ ಈ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿ ನಂತರ ಅದಕ್ಕೆ ಉತ್ತರವಾಗಿ ನಾವು ನೋಡುತ್ತೇವೆಂದು ಹೇಳಿ ಮುಕ್ತಾಯ ಮಾಡುವಂಥ ವಿಚಾರವಲ್ಲ. I want you to discuss this matter to the satisfaction of the Opposition. Therefore I want to be fair. Let me find out the mood of the..

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಅವರು ವರದಿಯಲ್ಲಿ ಕೂಡ ಇಂಡಿಕೇಟ್ ಮಾಡಿದ್ದಾರೆ. ತಮಗೆ ಗೊತ್ತಿರುವ ಹಾಗೆ ನಮ್ಮ ಮಾನ್ಯ ಶಿವಕುಮಾರ್‌ರವರು ಮಾತನಾಡುತ್ತಾ ನಾವು ಸದಸ್ಯರುಗಳು ಬಹಳ ಆಸಕ್ತಿವಹಿಸಿ ಅನೇಕ ವರದಿಗಳನ್ನು ಕೊಡುತ್ತೇವೆ, ಅದಕ್ಕೆ ಸರ್ಕಾರದಲ್ಲಿ ಏನು ಬೆಲೆ ಕೊಡುವುದಿಲ್ಲ, ಅದರಿಂದ ನಾವು ಕೊಟ್ಟಂಥ ವರದಿಯನ್ನು ಇಂಪ್ಲಿಮೆಂಟ್ ಮಾಡಬೇಕು ಎನ್ನತಕ್ಕಂಥದ್ದು ಹೇಳಿದರು. ತಕ್ಷಣ ಮುಖ್ಯಮಂತ್ರಿಗಳು ಕೂಡ ಅದಕ್ಕೆ ಸ್ಪಂದಿಸಿ ನಾನು ಸಿ.ಬಿ.ಐ.ಗೆ ರೆಫರ್ ಮಾಡುತ್ತೇನೆಂದು ಹೇಳಿದರು. ಆದ್ದರಿಂದ ಜಂಟಿ ಸದನ ಸಮಿತಿ ಕೊಟ್ಟಂಥ ವರದಿಯಲ್ಲಿ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳ ಮೇಲೆ ಆಪಾದನೆ ಮಾಡಿದ್ದಾರೆ. ಹೆಚ್ಚು ಕಡಿಮೆ ಅವರು ಯಾವ ರೀತಿಯಾಗಿ ಹೇಳಿದ್ದಾರೆ, ಯಾವ ಭಾಷೆಯನ್ನು ಉಪಯೋಗ ಮಾಡಿದ್ದಾರೆ ಅಂದರೆ, 21 ಜನರು ಯಾರು ಮತ್ತು ಆ ಇಲ್ಲೀಗಲ್ ಕ್ವಾಯರೀಸ್ ಬಗ್ಗೆ ಹೇಳಿದ್ದಾರೆ.

ಅಧ್ಯಕ್ಷರು : ನಮ್ಮಲ್ಲಿ ಇಬ್ಬರು ಶಿವಕುಮಾರ್ ಎನ್ನುವ ಹೆಸರಿನವರು ಇದ್ದಾರೆ. ಒಬ್ಬರು ಜಿ.ಬಿ. ಶಿವಕುಮಾರ್, ಇನ್ನೊಬ್ಬರು ಡಿ.ಕೆ. ಶಿವಕುಮಾರ್. ಇದು ಗ್ರಾನೈಟ್‌ಗೆ ಸಂಬಂಧಿಸಿದ್ದು..... ನನಗೆ ಕನ್‌ಫ್ಯೂಷನ್ ಆಯಿತು. ಅದಕ್ಕೆ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಜಿ.ಬಿ. ಶಿವಕುಮಾರ್, ಬಗ್ಗೆ ನಾನು ಹೇಳಿದ್ದುದು ಏನು ಅಧ್ಯಕ್ಷರೇ, ತಾವೇ ಅವರಿಗೆ ಮೊನ್ನೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ಮಾನ್ಯ

ಡಿ.ಕೆ. ಶಿವಕುಮಾರ್‌ರವರು ಅದರ ಬಗ್ಗೆ ಮಾತನಾಡಲೇ ಇಲ್ಲ. ಆದರೆ ಈಗ ಇದರ ಬಗ್ಗೆ ಮಾತನಾಡಿದರೂ ಮಾತನಾಡಬಹುದು. ಆದ್ದರಿಂದ ನಿಲುವಳಿ ಸೂಚನೆಗೆ ಸಮಯವನ್ನು ಯಾವಾಗ ನಿರ್ದಿಷ್ಟಪಡಿಸುತ್ತೀರಿ ಅದಕ್ಕೆ ನಾವು ಒಪ್ಪಿಕೊಳ್ಳುತ್ತೇವೆ. ನನ್ನ ಉದ್ದೇಶವೇನೆಂದರೆ, ಈ ವರದಿ ಮೇಲೆ ಸರ್ಕಾರ ಏನು ಕ್ರಮ ತಗೆದುಕೊಂಡಿದೆ? ಅದನ್ನು ಡಿಸ್‌ಕಸ್ ಮಾಡಬೇಕು. I want to discuss the action taken on the report. ನಮಗೆಲ್ಲರಿಗೂ ಮಾತನಾಡಲಿಕ್ಕೆ ಅವಕಾಶ ಸಿಗಬೇಕಲ್ಲವೇ? ಅದರಿಂದ ಈ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಬಾಕಿದನ್ನು ನೀವು ಯಾವಾಗ ಫಿಕ್ಸ ಮಾಡುತ್ತೀರೋ ಗೊತ್ತಿಲ್ಲ.

ಅಧ್ಯಕ್ಷರು : ಶಿವರಾಮೇಗೌಡರೆ; ನೀವು ಭಾಷಣ ಮಾಡಬೇಕು, ಅದಕ್ಕೆ ತಯಾರು ಮಾಡಿಕೊಳ್ಳಿ.

SRI M.MALLIKARJUNA KHARGE: I am reading from Page 8 of the report.

``A person holding a responsible and important position such as that of Minister cannot make a statement to the press and to the Legislature without evidence and without verfiying the facts. Not only has he mentioned 21 persons engaged in illegal quarrying in a press conference, but he has reiterated this on the floor of the House in the Council. Further, the Director of Mines and Geology has categorically stated that he has not given this information to the Minister. For reasons best known to the Minister, he has subsequently changed his stand and wrote to the legistature that he meant 21 places and not 21 persons. This gives room for doubt whether he is trying to protect or shield anyone. Further, finally even the matter by saying that no evidence was available to prove that these persons were engaged in illegal quarrying and that he had made the statement based on unofficial information received by him. Had he made this clarification on the floor of the House, this Committee could have taken cognisance of the same. In the absence of such a cohesive clarification in the Legislature, or before this Commitee, we are unable to understand what promised the Hon'ble Minister to retreat from his earlier statements. The Committee is uanble to accept his explanation and therefore we have no other opinion but to conclude that he has misled the House and the public. However, in the opinion of the Chairman of the Committee, the Hon'ble Minister had not misled the House and the public and that he had only made the statement in good faith''. ಮುಂದೆ ಏನೋ ಬೇರೆ ಬೇರೆ ಇದೆ. ನಾನು ಇದನ್ನು ಏಕೆ ಹೇಳುತ್ತಿದ್ದನೆಂದರೆ ಇಲ್ಲಿ ಈ ಬಂದು

ರಿಪೋರ್ಟ್ ಬಂದಮೇಲೆ ಮಂತ್ರಿಗಳು ಹೀಗೆ ಹೇಳಿದ್ದಾರೆ, ಅದು ಸರಿಯಲ್ಲ ಎನ್ನುತಕ್ಕಂಥದ್ದು ಎಲ್ಲಾ ಸದಸ್ಯರ ಭಾವನೆ ಇದ್ದಮೇಲೆ ಅವರಿಗೆ ಒಂದು ರೀತಿಯಿಂದ ಇಂಟಕ್ಟ್ ಮಾಡಿದಮೇಲೆ ಅದರ ಮೇಲೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ ಎನ್ನತಕ್ಕಂಥದ್ದು ಬಹಳ ಮುಖ್ಯ. ಇದನ್ನು ಏನು ಸಿ.ಬಿ.ಐ.ಗೆ ರೆಫರ್ ಮಾಡಿದ್ದಾರೋ, ರೆಫರ್ ಮಾಡಿ ಏನಾದರೂ ಅವರ ರಾಜೀನಾಮೆಯನ್ನು ಕೇಳಿದ್ದಾರೋ? ರಾಜೀನಾಮೆ ಇವತ್ತು ತೆಗೆದುಕೊಂಡು ಮುಂದೆ ಎನ್‌ಕ್ವೈರಿ ಮಾಡಬೇಕೆಂದು ಮಾಡಿದ್ದಾರೋ? ಎನ್ನತಕ್ಕಂಥದ್ದು ನಮಗೆ ಗೊತ್ತಾಗಬೇಕಾಗುತ್ತದೆ. ಏಕೆಂದರೆ ನಾಳೆ ಒಂದೇ ದಿವಸ ಇದೆ. ನಾಳೆ ಮುಂಜಾನೆ ತಾವು 10 ಗಂಟೆಗೆ ಮಾಡಿಕೊಟ್ಟರೂ ಸರಿ. ಈಗ ಬೇಕಾದರೆ 5 ಗಂಟೆಗೆ ಮಾಡಿದರೂ ಸರಿ. ಇಲ್ಲವೇ ನಾಳೆ 11 ಗಂಟೆಗೆ ತೆಗೆದುಕೊಂಡರೂ ಸರಿ. ಅದು ತಮಗೆ ಬಿಟ್ಟಿದ್ದು. ಆದ್ದರಿಂದ ಇದಕ್ಕೆ ಒಂದು ಅವಕಾಶ ಮಾಡಿಕೊಡಬೇಕು ಎಂದು ಹೇಳಿ ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ನಾನು ಆ ಸದನದ ಸಮಿತಿ ಸದಸ್ಯನಾಗಿದ್ದೆ. ಕೊನೆಯಲ್ಲಿ ನಾವೆಲ್ಲಾ ರಾಜೀನಾಮೆ ಕೊಟ್ಟೆವು, ಆ ಪ್ರಶ್ನೆ ಬೇರೆ. ಆದರೆ ಈ ಸಮಿತಿ ಉದ್ಭವಾದದ್ದೇ ನಿರ್ದೇಶಕರ ಸುತ್ತೋಲೆಯ ಮೇಲೆ. ಸಮಿತಿಯನ್ನು ತಾವೇ ರಚನೆ ಮಾಡಿದ್ದೀರಿ. ಮೊದಲನೇ ಅಧ್ಯಕ್ಷರಾಗಿ ನಾಗೇಗೌಡರಿದ್ದರು; ಆಮೇಲೆ ಕೃಷ್ಣಪ್ಪನವರು ಬಂದರು. ಅದು ಬೇರೆ. ಆದರೆ ಆ ವರದಿಯ ಬಗ್ಗೆ ಸಮಗ್ರವಾಗಿ ಸದನದಲ್ಲಿ ಚರ್ಚೆಯಾಗಬೇಕು. ಚರ್ಚೆಯಾಗುವುದಕ್ಕೆ ಬಹಳ ಅಮೂಲ್ಯವಾದಂಥ ವಸ್ತು ಇದು. ಚರ್ಚೆ ಆಗಲೇಬೇಕು ಮತ್ತು ಎರಡು ದೃಷ್ಟಿಯಿಂದ ಇದಾಗಬೇಕು. ಆ ನಿರ್ದೇಶಕರು ಈ ಸಮಿತಿ ನಡೆಯುವಾಗಲೇ ಡೆಲ್ಲಿಗೆ ಹೊರಟುಹೋದರು. ಅವರನ್ನು ಮತ್ತೆ ನಾವು ಕರೆಸುವುದಕ್ಕಾಗಲಿಲ್ಲ. ಅವರು ಬಹಳ ಪ್ರಾಮುಖವಾದಂಥ ಸಾಕ್ಷಿ ನಮ್ಮ ಸಮಿತಿ ಮುಂದೆ. ಅದು ಅತ್ಯಂತ ಮುಖ್ಯವಾದದ್ದು. ಮತ್ತು ಸಮಿತಿಗೆ ಮಂತ್ರಿಗಳೂ ಕೂಡ ಬರಲಿಲ್ಲ. ಈ ರೀತಿ ಅನೇಕ ದ್ವಂದ್ವ ವಿಚಾರಗಳಿವೆ. ಇದನ್ನು ಸಮಗ್ರವಾಗಿ ಚರ್ಚೆ ಮಾಡಬೇಕಾಗಿದೆ. ಬಹಳ ಗಂಭೀರವಾದ ವರದಿ ಅದು. ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಕಾಲವನ್ನು ಕೊಡಬೇಕು. ಯಾವ ಸಂದರ್ಭದಲ್ಲಿ ಚರ್ಚೆ ಮಾಡಬೇಕು ಎಂದು ಹೇಳಬೇಕು. ಸುದೀರ್ಘವಾಗಿ ಈ ಬಗ್ಗೆ ಚರ್ಚೆ ಮಾಡಬೇಕೆಂದು ನಾವೆಲ್ಲಾ ಬಯಸಿದ್ದೇವೆ. ಮತ್ತು ನಮ್ಮ ಬಯಕೆ ಇದೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ನಾನೂ ಕೂಡ...

ಅಧ್ಯಕ್ಷರು : ಇರಲಿ ಬಿಡಿ; ಅದೇತಾನೇ Ultimate point is, you want some time to discuss this subject.

ಶ್ರೀ ಬಿ.ಎಸ್. ವಡ್ಡರ್ : 17-2-97ರಂದು ರೈತರಿಗೆ ಸಂಬಂಧಿಸಿದ ರಾಯಬಾಗ ಸಕ್ಕರೆ ಕಾರ್ಖಾನೆ ವಿಷಯದಲ್ಲಿ ಮಾಹಿತಿ ಕೇಳಿದ್ದೆ. ನಿಯಮ 351ರ ಕೆಳಗೆ...

ಅಧ್ಯಕ್ಷರು : ನಾಳೆ ಅವಕಾಶ ಕೊಡುತ್ತೇನೆ ನಿಮಗೆ ವಡ್ಡರ್ ಅವರೆ.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ಸಮಗ್ರವಾಗಿ ಆ ವರದಿಯನ್ನು ಚರ್ಚೆ ಮಾಡಬೇಕು ಅಂದರೆ ಅದರ ಬಗ್ಗೆ ಸಮಯವನ್ನು ತಾವು ಯಾವಾಗ ನಿಗದಿ ಮಾಡುತ್ತೀರೋ ಆಗ ಚರ್ಚೆಗೆ ಬರಲಿ. ಆದರೆ ಮಾನ್ಯ ವಿರೋಧ ಪಕ್ಷದ ನಾಯಕರು ಎತ್ತಿರತಕ್ಕ ಒಂದು ವಿಚಾರ ಏನೆಂದರೆ ಆ ಸಮಿತಿಯಲ್ಲಿ ಮಾನ್ಯ ಗಣಿ ಮಂತ್ರಿಗಳ ಬಗ್ಗೆ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಆದರಲ್ಲೂ ಬಹಳ ಪ್ರಾಮುಖ್ಯವಾಗಿ we are unable to accept the explanation of the Hon. Minister and we are left no other option but to come to the conclusion that he has misled the House. ಎನ್ನತಕ್ಕ ವಿಚಾರ. ಇದೇ ವಿಚಾರ ಮಾನ್ಯ ಸಭಾಧ್ಯಕ್ಷರೆ, ಮೇಲ್ಮನೆಯಲ್ಲ ಚರ್ಚೆಯಾಗುತ್ತಾ ಇದೆ. ಏಕೆಂದರೆ misleading the House pertains to the Upper House . because the statement said to have been made on the floor of the Council. ಅದಕ್ಕೆ ಸಂಬಂಧಪಟ್ಟಹಾಗೆ ಚರ್ಚೆ ಬಂದಿರತಕ್ಕಂಥದ್ದು. ಆದ್ದರಿಂದ misleading the House it does not apply to this House. It applies to the council now.

SRI M. MALLIKARGUNA KHARGE : That is why I specifically asked what is the action taken on this report, not only the charges against the Minister but also on other several points.

SRI M.C. NANAIAH : One relates to what action the Government has taken in respect of several other recommendations of the Committee. ಅಲ್ಲಿರತಕ್ಕ ಇತರೇ ಹಲವಾರು ವಿಚಾರಗಳ ಬಗ್ಗೆ ಸರ್ಕಾರ ತೆಗೆದುಕೊಂಡಿರತಕ್ಕ ಕ್ರಮಗಳು ಅದು ಬೇರೆ. ಮಂತ್ರಿಗಳ ಬಗ್ಗೆ ಹೇಳಿರತಕ್ಕ ಒಂದು ವಿಚಾರದ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಎತ್ತಿರತಕ್ಕಂಥದ್ದು ಅದು ಈ ಸದನಕ್ಕೆ ಸಂಬಂಧಪಡುವಂಥ ವಿಚಾರವಲ್ಲ. ಅದು ಮೇಲ್ಮನೆಗೆ ಸಂಬಂಧಪಡುತ್ತಾ ಇರತಕ್ಕ ವಿಚಾರ. ಕಾರಣ ಅವರು ಎತ್ತಿರತಕ್ಕ ವಿಚಾರ ಯಾವುದಿದೆ ಸದನವನ್ನು ತಪ್ಪುದಾರಿಗೆ ಎಳೆದಿದ್ದಾರೆ ಎನ್ನತಕ್ಕದ್ದು, ಮೇಲ್ಮನೆಗೆ ಸಂಬಂಧಪಟ್ಟಿರತಕ್ಕ ವಿಚಾರವನ್ನೇ ಸಮಿತಿ ಸದಸ್ಯರು ಚರ್ಚೆ ಮಾಡಿ ಅವರು ಆ ಸಂದರ್ಭದಲ್ಲಿ ಈ ಹೇಳಿಕೆಯನ್ನು ಕೊಟ್ಟಿದ್ದರಿಂದ ಸದನವನ್ನು ಅವರು ತಪ್ಪುದಾರಿಗೆ ಎಳೆದಿದ್ದಾರೆ ಎಂಬ ವಿಚಾರವನ್ನು ಹೇಳಿದ್ದಾರೆ. ಇದು ಮೇಲ್ಮನೆಯಲ್ಲಿ ಚರ್ಚೆಯಾಗುತ್ತಾ ಇದೆ. ನಾಳೆ ಇದಕ್ಕೆ ಸಂಬಂಧಪಟ್ಟಹಾಗೆ ಸಭಾಪತಿಯವರು ತಮ್ಮ ತೀರ್ಮಾನವನ್ನು ಕೊಡುವವರಿದ್ದಾರೆ. ಆದರೆ ಮಾನ್ಯ ಸಭಾಧ್ಯಕ್ಷರೆ, ಇತರೆ ವಿಚಾರಗಳಿಗೆ ಸಂಬಂಧಪಟ್ಟಹಾಗೆ ಸರ್ಕಾರ ಏನೇನು ಕ್ರಮಗಳನ್ನು ಕೈಗೊಂಡಿದೆ ಮತ್ತು ಇದನ್ನು ಸಮಗ್ರವಾಗಿ ಚರ್ಚೆ ಮಾಡಬೇಕು ಎನ್ನುವ ವಿಚಾರವನ್ನು ತಮ್ಮ ಕೊಠಡಿಯಲ್ಲಿ ನಾವು ಚರ್ಚೆ ಮಾಡೋಣ. ಯಾವಾಗ ಅದಕ್ಕೆ ಸಮಯ ನಿಗದಿ ಮಾಡಬೇಕು ಎನ್ನತಕ್ಕದ್ದು. ತಾವು ಒಂದು ಸಭೆಯನ್ನು ಕರೆಯಿರಿ ಮಾನ್ಯ ಸಭಾಧ್ಯಕ್ಷರೇ ನಾನು, ಖರ್ಗೆಯವರು, ವಾಟಾಳ್ ನಾಗರಾಜ್ ಅವರು, ನಂಜೇಗೌಡರು ಎಲ್ಲಾ ಸೇರಿ ನಿಮ್ಮ ಕಛೇರಿಗೆ ಬಂದು ಚರ್ಚೆ ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವೇ ಸಮಯವನ್ನು ನಿಗದಿ ಮಾಡಿಬಿಡಿ. ಏಕೆಂದರೆ ಮತ್ತೆ ನಾವು ಚರ್ಚೆ ಮಾಡುವುದಕ್ಕೆ ಟೈಮೇ ಇಲ್ಲವಲ್ಲಾ. ನಾಳೆ ಒಂದೇ ದಿವಸ ಇದೆ. ಆದಕ್ಕಾಗಿ ಟೈಮ್ ನಿಗದಿ ಮಾಡಿ. ಏಕೆಂದರೆ ಅವರು ಹೇಳುವುದು ಬೇರೆ. ಈ ಜಂಟಿ ಸಮಿತಿ ಆದಮೇಲೆ ರಿಪೋರ್ಟ್ ಬಂದಮೇಲೆ ಈ ಸದನದ ಸ್ವತ್ತೂ ಕೂಡ ಆದು ಆಯಿತು. ಈ ರಿಪೋರ್ಟಿನಲ್ಲಿ ಏನೇನು ಬರುತ್ತದೆ ಅಥವಾ ಏನೇನು ಬರೆದಿದ್ದಾರೆ ಅದೆಲ್ಲವನ್ನೂ ಕೂಡ ನಾವು ಚರ್ಚೆ ಮಾಡುವುದಕ್ಕೆ ಅವಕಾಶ ಇದೆ. ಏಕೆಂದರೆ ಈ ಸದನದ ಸದಸ್ಯರೂ ಕೂಡ ಆ ಸಮಿತಿ ಸದಸ್ಯರಾಗಿದ್ದರು. ಈ ಸದನದ ಸದಸ್ಯರೂ ಸದಸ್ಯರಾಗಿದ್ದಾರೆ. ಇವತ್ತು ಒಂದು ವರದಿ ಹೊರಗಡೆ ಬಂದಿದೆ. ಆ ವರದಿಯನ್ನು ಸದನಕ್ಕೆ ಸಲ್ಲಿಸಿದ್ದಾರೆ. ಸಲ್ಲಿಸಿದ ಮೇಲೆ ಅದರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಮತ್ತು ಮಂತ್ರಿಗಳು ಅಲ್ಲಿ ಸುಳ್ಳು ಹೇಳಿದರೇನು, ಇನ್ನೊಂದು ಕಡೆ ಹೇಳಿದೇನು, ಅದೆಲ್ಲಾ ಇಲ್ಲಿ ಬಂದಿದ್ದ ಕಾರಣ ಅದೇನೂ ಬಾರ್ ಆಗುವುದಿಲ್ಲ. ಆದಕ್ಕಾಗಿ ದಯವಿಟ್ಟು ಚರ್ಚೆಗೆ ಕಾಲವನ್ನು ತಾವು ನಿಗದಿ ಮಾಡಿ ನಮಗೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಿನ್ನೆ ದಿವಸ ನಾವು ಯಾವುದೋ ಮಾತುಕತೆ ಆಡುತ್ತಿದ್ದಾಗ ಇದ್ದಕ್ಕಿದ್ದಹಾಗೆ ಸಿ.ಬಿ.ಐ.ಗೆ ಒಂದು ವರದಿ ಹೊರಟುಹೋಯಿತು. ತಕ್ಷಣ ಸಿ.ಬಿ.ಐ. ತನಿಖೆ ಆಗಬೇಕು ಎಂದು ಆದಾಗಲಿ. ನಮ್ಮದೇನೂ ಆಭ್ಯಂತರವಿಲ್ಲ. ಪ್ರತಿ ಸಾರಿ ನಮ್ಮವರು ಅನೇಕ ವಿಚಾರದಲ್ಲಿ ಸಿ.ಓ.ಡಿ. ಇಲ್ಲವೇ ಸಿ.ಬಿ.ಐ.ಗೆ ಏತಕ್ಕೆ ಕಳುಹಿಸುತ್ತೀರಿ ಎಂದು ಹೇಳುತ್ತಿದ್ದರು. ಆದರೂ ಸಡೆನ್ನಾಗಿ ಆದು ಹೋಯಿತು. ಅದರ ಬಗ್ಗೆ ವ್ಯಾಖ್ಯಾನ ಆಮೇಲೆ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ವ್ಯಾಖ್ಯಾನ ಏಕೆ ಮಾಡಬೇಕು ಅಂದರೆ ಅನೇಕ ಸದನದ ಸಮಿತಿಗಳಾಗಿವೆ; ಎಷ್ಟೋ ವರದಿಗಳು ಬಂದಿವೆ. ಎಷ್ಟು ರಿಪೋರ್ಟ್ ಸಿ.ಬಿ.ಐ.ಗೆ ಹೋಗಿವೆ ಇಲ್ಲಿಯವರೆಗೆ? ಅಂದರೆ ಸರ್ಕಾರ ಏನು ಅಸಮರ್ಥವಾಗಿದೆಯೇ? ಇದು ಒಂದು. ಈ ರೀತಿ ಐಸೊಲೇಟ್ ಮಾಡಿ ಕಳುಹಿಸುವುದಕ್ಕಿಂತಲೂ, ಯಾವುದೇ ಇರೆಗ್ಯುಲಾರಿಟೀಸ್ ಆದರೆ ಆಕ್ಷನ್ ತೆಗೆದುಕೊಳ್ಳಬಾರದು ಎಂದು ಹೇಳುವುದಿಲ್ಲ. ನಿಮ್ಮ ಹತ್ತಿರ ಅನೇಕ ಅಧಿಕಾರಿಗಳಿದ್ದಾರೆ. ಇನ್ನೂ ನಿಮ್ಮಲ್ಲಿ ಪೋಲೀಸರಿದ್ದಾರೆ. ನೀವಿದ್ದೀರಿ. ಈ ಸರ್ಕಾರ ಜೀವಂತವಾಗಿದೆ. ನೀವು ಸಡೆನ್ನಾಗಿ ಒಂದು ಕೇಸ್‌ನಲ್ಲಿ ಹಾಗೆ ಮಾಡುವುದು, ಇನ್ನೊಂದು ಕೇಸ್‌ನಲ್ಲಿ ಬಚ್ಚಿಡುವುದು, ಇದು ಮಾಡಬಾರದು, ಅದಕ್ಕಾಗಿ ಈ ರೀತಿಯಾಗಿ ಐಸೊಲೇಟ್ ಮಾಡುವಂಥದ್ದು ಅಥವಾ ಪ್ರತ್ಯೇಕವಾಗಿ ವೆಂಜೆನ್ಸ್ ಆಕ್ಟ್ ಕೂಡ ಗೌರವ ತರತಕ್ಕದ್ದಲ್ಲ. ಮತ್ತು ನೀವು ಇಲ್ಲಿಯವರೆಗೆ ಯಾವ ರಿಪೋರ್ಟ್‌ನ್ನೂ ಕೂಡ ಯಾವ ಸರ್ಕಾರ ಕೂಡ ಕೇಂದ್ರ ಸರ್ಕಾರದ ಸಿ.ಬಿ.ಐ.ಗೆ ಕಳುಹಿಸಿಯೇ ಇಲ್ಲ. ಇದು ಮೊದಲನೇ ಸಲ. ತರಾತುರಿಯಲ್ಲಿ ಮಾತನಾಡಿಕೊಂಡು ಈ ರೀತಿಯಾಗಿ ಮಾಡಿದರೆ ನಾವು ಏನು ಹೇಳಬೇಕಾಗುತ್ತದೆಂದರೆ ಈ ಸರ್ಕಾರ ವಿತ್ ವೆಂಜೆನ್ಸ್ ಆಕ್ಟ್ ಮಾಡುವುದಕ್ಕೆ ಇವತ್ತು ಪ್ರಾರಂಭ ಮಾಡಿದೆ ಎನ್ನುವುದಕ್ಕೆ ಇದೊಂದೇ ಸಾಕ್ಷಿ ಸಾಕು.

ಶ್ರೀ ವಾಟಾಳ್ ನಾಗರಾಜ್ : ಆ ರೀತಿ ಇದ್ದರೆ ಎಲ್ಲಾ ಸಮಿತಿ ವರದಿಗಳನ್ನು ಇದರ ಮುಂದೆ ಮಂಡಿಸಲಿ. ಆ ವರದಿಗಳೆಲ್ಲಾ ಚರ್ಚೆಯಾಗಲಿ. ಯಾರು ಯಾರಮೇಲೆ ಏನೇನಾಗಿದೆ ಅದನ್ನೆಲ್ಲಾ

ಸಂಪೂರ್ಣವಾಗಿ ನೇರವಾಗಿ ಸಿ.ಬಿ.ಐ.ಗೇ ಕಳುಹಿಸೋಣ. ಕೇವಲ ಅಂದಾಜು ಸಮಿತಿಯ ಯಾವುದೇ ಒಂದು ವರದಿಯನ್ನು ಯಾವುದೋ ಒಂದು ಕಾಲದಲ್ಲಿ ಕೊಟ್ಟಿದ್ದನ್ನೇ ಸಿ.ಬಿ.ಐ.ಗೆ ಕಳುಹಿಸತಕ್ಕಂಥ ಉದ್ದೇಶ ಏನಿದೆ? ಅದರ ಮೇಲೆ ಏನಿದೆ? ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕಾಗುತ್ತದೆ. ಅದು ಚರ್ಚೆಯ ವಸ್ತು. ಒಂದು ರೀತಿ ಸರ್ಕಾರ ತನ್ನ ಅಧಿಕಾರ ದುರುಪಯೋಗ ಮಾಡಿಕೊಂಡು ಇದರಲ್ಲಿ ರಾಜಕಾರಣ ಮಾತ್ರ ಮಾಡಬಾರದು ಈ ವರದಿಗಳ ವಿಚಾರದಲ್ಲಿ. ಮತ್ತು ಈ ಸದನವನ್ನು ಅವರು ರಾಜಕಾರಣಕ್ಕೆ ಉಪಯೋಗಿಸಿಕೊಳ್ಳಬಾರದು ಎನ್ನತಕ್ಕಂಥದ್ದು ಅತ್ಯಂತ ಪ್ರಾಮುಖ್ಯವಾದಂಥ ಪ್ರಶ್ನೆ ಎನ್ನತಕ್ಕ ಮಾತನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ನಾವು ತರುತ್ತಿದ್ದೇವೆ. ಯಾರಿಗೂ ಗೊತ್ತಾಗಲಿಲ್ಲ. ತಕ್ಷಣವೇ ಅದು ಸಿ.ಬಿ.ಐ.ಗೆ ಎಂದು ಹೇಳಿಬಿಟ್ಟಿದ್ದು ಏಕೆ? ಏಕೆ ಸಿ.ಬಿ.ಐ.ಗೆ ಹೋಗಬೇಕಾಗಿತ್ತು? ಕಾರಣ ಏನು? ಸಿ.ಬಿ.ಐ.ಗೆ ಹೋಗತಕ್ಕಂಥ ಅಪರಾಧಗಳು ಏನೇನಿದ್ದವು? ಇಲ್ಲಿ ನಮ್ಮ ಸಿ.ಓ.ಡಿ. ಅಸಮರ್ಥವಾಗಿದೆಯೇ? ಇಲ್ಲಿ ಲೋಕಾಯುಕ್ತ ಇಲ್ಲವೇ? ಇಲ್ಲಿ ಪೋಲಿಸ್ ಇಲ್ಲವೆ? ಯಾವುದೂ ಇಲ್ಲದೆ ಅದೊಂದೇ ಒಂದು ಕಳುಹಿಸಬೇಕು ಅಂದರೆ ಅದರ ಹಿಂದೆ ಇರತಕ್ಕಂಥ ವಿಚಾರಗಳೇನು? ಇದು ಬಹಳ ಪ್ರಾಮುಖ್ಯ.

ಶ್ರೀ ವೈ. ರಾಮಕೃಷ್ಣ : ಈಗ ಗ್ರಾನೈಟ್ ಕಮಿಟಿ ರಿಪೋರ್ಟ್ ಏನು ಬಂದಿದೆ ಅದನ್ನೂ ಸಿ.ಬಿ.ಐ.ಗೆ ಒಪ್ಪಿಸಿ ಬಿಟ್ಟರೆ ಮೇಲು ಎಂದು ಕಾಣಿಸುತ್ತದೆ. ಸುಮ್ಮನೆ ನಾವು ಇಲ್ಲಿ ವಿಶೇಷವಾಗಿ ಚರ್ಚೆ ಮಾಡುವ ಬದಲು ಅದೆನ್ನೂ ಸಿ.ಬಿ.ಐ.ಗೇ ಒಪ್ಪಿಸಿಬಿಡಿ. ಇನ್ನೇನಿದೆ ಅಲ್ಲಿ? ಇದು ನನ್ನ ಸಲಹೆ ಸ್ವಾಮಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಸಚಿವರು ಈಗ ಹೇಳಿದರು. ಸಚಿವರ ಹೇಳಿಕೆ ಆ ಸದನಕ್ಕೆ ಮಾತ್ರ ಸಂಬಂಧಪಟ್ಟಿರತಕ್ಕಂಥದ್ದು ಎಂದು. ಸಚಿವರು ಎರಡೂ ಸದನಕ್ಕೆ ಸಂಬಂಧ ಪಟ್ಟವರು. ಮತ್ತು ಈ ವರದಿಯನ್ನು ಕೊಟ್ಟಿರುವುದು ಎರಡೂ ಸದನಗಳ ಜಂಟಿ ಸಮಿತಿ. ನಾವು ಸ್ಪಷ್ಟವಾಗಿ ಈ ಸಮತಿಯಲ್ಲಿ ಹೇಳಿದ್ದೇವೆ ಮಂತ್ರಿಗಳು ಸದನವನ್ನು ತಪ್ಪುದಾರಿಗೆ ತೆಗೆದುಕೊಂಡು ಹೋಗಿದ್ದಾರೆ ಎಂದು. ಅವರು ರಾಜೀನಾಮೆ ಕೊಡಬೇಕು ಎನ್ನತಕ್ಕದ್ದು ಸತ್ಯ ಇದೆ. ಬೇರೆ ಏನೂ ಮಾರ್ಗವೇ ಇಲ್ಲ.

ಶ್ರೀ ಹೆಚ್. ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೆ, ನಿನ್ನೆ ನಾವು ಏನೋ ಮಾತನಾಡುತ್ತಿದ್ದೆವು. ಕಿವಿಗೆ ಹಾಕಿಕೊಳ್ಳುವುದರೊಳಗೆ ಅದನ್ನು ಸಿ.ಬಿ.ಐ.ಗೆ ಒಪ್ಪಿಸುತ್ತೇವೆ ಎಂದು ಹೇಳಿಬಿಟ್ಟರು. ಅದೇನು ಮಾತನಾಡಿಕೊಂಡು ಬಂದಿದ್ದರೋ ಏನೋ ನೀವು ಎತ್ತಿ ನಾನು ಮಾಡುತ್ತೇನೆ ಎನ್ನುವ ಲೆಕ್ಕದಲ್ಲಿ. ಸಾಮಾನ್ಯವಾಗಿ ಸರ್ಕಾರದವರು ಇಷ್ಟು ತರಾತುರಿಯಿಂದ ಮಾಡುವುದಿಲ್ಲ. ನಾನು ಅದು ಯಾವುದು ಎಂಬುದು ಆಮೇಲೆ ಕೇಳಿದೆ. ಆ ಹಿನ್ನೆಲೆ ನೋಡಿದಮೇಲೆ ನಮಗೆ ಅನುಮಾನ ಬಂದಿದ್ದು ವಾಸ್ತವ. ಸುಳ್ಳು ಏತಕ್ಕೆ ಹೇಳೋಣ? ಸತ್ಯ ಹೇಳಬೇಕಾಗುತ್ತದೆ ಈ ಸಭೆಯಲ್ಲಿ. ಯಾರೇ ಒಬ್ಬ ವ್ಯಕ್ತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಹೀಗೆ ಮಾಡಬಾರದು. ಇಷ್ಯೂಗಳ ಮೇಲೆ ಮಾಡಿ ಸಿ.ಬಿ.ಐ.ಗೆ ನಾನು ಬೇಡ ಎಂದು ಹೇಳುವುದಿಲ್ಲ. If it is a policy matter, alright, let us decide that all the reports should be referred to C.B.I. for enquiry. but just because a particular person is involved if you are referring the matter to the C.B.I. I doubt the bonafides of the

Government. I am sorry, I have to tell this, without fear or favour, we have to express our views in this august House. This House should not be used for taking vengence against anybody, that is all my submission. ಇದರಲ್ಲಿ ಇನ್ವಾಲ್ವ್ ಆಗಿರುವ ವ್ಯಕ್ತಿಗಳು, ಆಮೇಲೆ ನನಗೆ ಇದು ಗೊತ್ತಾಯಿತು. ನನಗೆ ಆಶ್ಚರ್ಯವಾಗಿ ಹೋಯಿತು. ಎಲ್ಲಿಯಾದರೂ ಒಂದು ಸದನ ಸಮಿತಿ ವರದಿಯನ್ನು ಸಿ.ಬಿ.ಐ.ಗೆ ಹಾಕುತ್ತಾರೆ ಎಂದರೆ, ಏನಪ್ಪಾ ಇದು? ಏಕೆಂದರೆ ಸಂಬಂಧಪಟ್ಟ ವ್ಯಕ್ತಿಗಳು ಹಾಸನದವರೇ ಇದ್ದಾರೆ. ನನಗೆ ಬಹಳ ಇಕ್ಕಟ್ಟು ಇದು. ಹೇಳಬೇಕಾಗುತ್ತದೆ. ಹೇಳದೇ ಇರುವಹಾಗಿಲ್ಲ ನಾನು. ನನಗೆ ಗೊತ್ತಾಗಿದ್ದನ್ನು ನಾನು ಹೇಳಬೇಕಾಗುತ್ತದೆ. ಇದು ಸರ್ಕಾರದ ನಿಲುವು. ನೀವು ನಮ್ಮ ನಿಲುವನ್ನು ಮಾರ್ಪಡಿಸಿಕೊಳ್ಳಿ. ಮಾರ್ಪಡಿಸಿಕೊಂಡು ಎಲ್ಲವನ್ನೂ ಸಿ.ಬಿ.ಐ.ಗೆ ಹಾಕುವುದಾದರೆ ನನ್ನ ಅಭ್ಯಂತರವಿಲ್ಲ ನಾನು ಬೇಡ ಎಂದು ಹೇಳುವುದೇ ಇಲ್ಲ. ಆದರೆ ಒಂದೊಂದು ಸಮಿತಿ ವಿಚಾರದಲ್ಲಿ ಒಂದೊಂದು ವ್ಯಕ್ತಿ ಇನ್ವಾಲ್ವ್ ಆಗುತ್ತಾನೆ ಎಂದು ಹೇಳಿ, ಒಂದೊಂದು ತೀರ್ಮಾನ ತೆಗೆದುಕೊಳ್ಳುತ್ತೇವೆ, ಒಂದೊಂದು ಪಾಲಿಸಿ ಮಾಡಿಕೊಳ್ಳುತ್ತೇವೆ ಅಂತ ಆದರೆ, I am sorry we cannot agree.

ಶ್ರೀ ವಾಟಾಳ್ ನಾಗರಾಜ್ : ಸಿ.ಬಿ.ಐ.ಗೆ ಕಳುಹಿಸುವುದಕ್ಕೆ ಮುಂಚೆ ಇದರ ಬಗ್ಗೆ ಚರ್ಚೆಯಾಗಬೇಕು. ಇನ್ನೂ ಕಳುಹಿಸಿಲ್ಲ, ಕಳುಹಿಸಬೇಕು ಎಂದು ತೀರ್ಮಾನ ತೆಗೆದುಕೊಂಡಿದ್ದೀರಿ. ಕಳುಹಿಸುವುದಕ್ಕೆ ಮುಂಚೆ ಸದನದಲ್ಲಿ ಚರ್ಚೆಯಾಗಬೇಕು. ಅಂದಾಜು ಸಮಿತಿ ಅದು ಯಾರ ಮೇಲೆ ಮಾಡಿರತಕ್ಕಂಥಾದ್ದು? ಅವರು ಯಾರು? ಯಾರು ಸಂಬಂಧಪಟ್ಟವರು? ಅದಕ್ಕೆ ಸಂಬಂಧ ಏನು? ಏಕಸ್ಮಾತ್ ಸಿ.ಬಿ.ಐ.ಗೆ ಒಪ್ಪಿಸುವುದಕ್ಕೆ ಮುಂಚೆ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕು. ಈ ಸದನದಲ್ಲಿ ಚರ್ಚೆ ಆಗುವುದಕ್ಕೆ ಮುಂಚೆ ಅದನ್ನು, ಸಿಬಿಐಗೆ ಕಳುಹಿಸಿಕೊಡದು. ನಾವ್ಯಾರು ಅದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ನಾವೆಲ್ಲ ಮಾತನಾಡಬೇಕು. ತಕ್ಷಣ, ಒಂದು ತರಹ ನಾಟಕೀಯವಾಗಿ ಅಲ್ಲಿ ಯಾರೋ ಪ್ರಾರಂಭ ಮಾಡಿದರು, ಇಲ್ಲಿ ಮುಖ್ಯಮಂತ್ರಿಗಳು ಬಂದರು; ಸಿ.ಬಿ.ಐ.ಗೆ ಕಳುಹಿಸುತ್ತೇವೆ ಎಂದು ಹೇಳಿದರು ಅಂದರೆ ನಮಗೆ ಯಾರಿಗೂ ಗೊತ್ತೇ ಆಗಲಿಲ್ಲ. ಬೆಳಿಗ್ಗೆ ಗೊತ್ತಾಯಿತು. ಇದರ ಹಿಂದೆ ಏನು ಕಾರಣ ಇದೆ? ಇದರ ಹಿಂದೆ ಭಾರಿ ದೊಡ್ಡ ರಾಜಕೀಯ ಇದೆ. ನಿಜವಾಗಿಯೂ ಬಹಳ ನೋವಾಗುತ್ತದೆ. ನಾವು ಯಾರ ಬಗ್ಗೆಯೂ ಬಹಳ ಕೆಟ್ಟ ಮಾತು ಹೇಳಬೇಕು ಎಂದಲ್ಲ, ಅಥವಾ ವೈಯಕ್ತಿಕವಾಗಿ ನಮಗೆ ಯಾರ ಮೇಲೂ ದ್ವೇಷ ಇಲ್ಲ. ಪ್ರಾಮಾಣಿಕವಾಗಿ ಇದನ್ನು ಚಿಂತನೆ ಮಾಡಬೇಕಾದದ್ದು. ಸುಮ್ಮನೆ ಒಬ್ಬರಿಗೆ ಒಂದೊಂದು ತರಹ ಈ ಸದನದಲ್ಲಿ ನಾವು ಮಾಡುವುದಾದರೆ, ಈ ಸದನ ಆ ರೀತಿಯಲ್ಲಿ ಆಗಬಾರದು. ಸದನ ಯಾರದೋ ಇಚ್ಛೆಗೆ ತಕ್ಕಂತೆ ಹೋಗತಕ್ಕಂಥಾದ್ದು ಆಗಬಾರದು. ಅದು ಒಳ್ಳೆಯದಲ್ಲ, ಅದು ಸಂಪ್ರದಾಯವೂ ಅಲ್ಲ. ಇದು ಕೆಟ್ಟ ಸಂಪ್ರದಾಯವಾಗುತ್ತದೆ. ಕರ್ನಾಟಕ ರಾಜ್ಯದ ಇತಿಹಾಸದಲ್ಲ ಯಾರನ್ನೋ ತಲೆ ತೆಗೆಯುವುದಕ್ಕೆ, ಯಾರನ್ನೋ ಮುಗಿಸುವುದಕ್ಕೆ, ತಮಗೆ ಆಗದೇ ಇರುವವರನ್ನು ಇದು ಮಾಡುವುದಕ್ಕೆ ಈ ಸದನವನ್ನು ಉಪಯೋಗಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಇದು ಪ್ರಾಮಾಣಿಕವಾಗಿರಬೇಕು, ಪ್ರಾಮಾಣಿಕವಾದ ಚಿಂತನೆ ಆಗಬೇಕು. ತಾವು ಏನು ನಿನ್ನೆ ಹೇಳಿದ್ದೀರಿ, ಅಂದಾಜು ಸಮಿತಿಯದ್ದು ಸಮಗ್ರ ಚರ್ಚೆ. ಅದು ಒಂದೇ ಅಲ್ಲ. ಬರದಿರತಕ್ಕಂಥ ಎಲ್ಲಾ

ಸಮಿತಿಗಳ ವರದಿಗಳನ್ನು ಈ ಸದನದ ಮುಂದೆ ಚರ್ಚೆ ಆಗಬೇಕು ಎಂದು, ತಮ್ಮ ಮೂಲಕ ನಾವು ಕೈಮುಗಿದು ಪ್ರಾರ್ಥನೆ ಮಾಡುತ್ತಿದ್ದೇವೆ. ಬಹಳ ನೋವಿನಿಂದ ಈ ಮಾತನ್ನು ನಾವು ಹೇಳುತ್ತಿದ್ದೇವೆ.

ಅಧ್ಯಕ್ಷರು : ಇದು ಯಾವಾಗ ಮಾಡೋಣ? ಟೈಮ್ ಹೇಳಿ. Because we have very little time. ನಾಳೆ ಕ್ಲೋಸ್ ಮಾಡುತ್ತಿದ್ದೇವೆ ಅಲ್ಲವೇ?

ಶ್ರೀ ವಾಟಾಳ್ ನಾಗರಾಜ್ : ಸಿ.ಬಿ.ಐ. ಬಗ್ಗೆ ನಿನ್ನೆ ಹೇಳಿದರಲ್ಲಾ, ಅದರ ಬಗ್ಗೆ ಸರ್ಕಾರ ಏನು ಹೇಳುತ್ತದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದು ಎಸ್ಟಿಮೇಟ್ಸ್ ಕಮಿಟಿ ರಿಪೋರ್ಟ್ ಬಗ್ಗೆ. ಅದು ಮುಖ್ಯಮಂತ್ರಿಗಳು ಸಿ.ಬಿ.ಐ.ಗೆ ಕಳುಹಿಸಿದರೆ ಕಳುಹಿಸಬಹುದು ಎಂದು ಹೇಳಿದರು.

ಅಧ್ಯಕ್ಷರು : ನನಗೆ ನೆನಪಿರುವ ಹಾಗೆ ನಿನ್ನೆ ಶಿವಕುಮಾರ್ ಅವರು ಹೇಳಿದ್ದುದು, ಸಿ.ಬಿ.ಐ. ಎನ್‌ಕ್ವೈರಿಯನ್ನು ಎಸ್ಟಿಮೇಟ್ಸ್ ಕಮಿಟಿಯವರೇ ರೆಕಮೆಂಡ್ ಮಾಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಲ್ಲ, ಯಾರೇ ಮಾಡಲಿ.....

ಶ್ರೀ ವಾಟಾಳ್ ನಾಗರಾಜ್ : ಅನೇಕ ಸಾರಿ ಕಮಿಟಿಯಲ್ಲಿ ಸಿ.ಓ.ಡಿ. ಎನ್ನುತ್ತಾರೆ, ಸಿ.ಬಿ.ಐ. ಎನ್ನುತ್ತಾರೆ. ಇಂಥಾದ್ದು ತಕ್ಷಣ ಬೇರೆ ಕಮಿಟಿಯವರು ಮಾಡಿರುವುದನ್ನು ತಾವು ಪರಾಂಭರಿಸಬೇಕು ಸ್ವಾಮಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದರ ಮೇಲೆ ಆಕ್ಷನ್ ಟೇಕನ್ ಏನು?

ಅಧ್ಯಕ್ಷರು : ನನಗೆ ಸಂಬಂಧ ಇಲ್ಲದೇ ಇರುವುದನ್ನು...

ಶ್ರೀ ವಾಟಾಳ್ ನಾಗರಾಜ್ : ನಾವು ಅದನ್ನು ಎಲ್ಲಿಯೂ ಹೇಳುವುದಿಲ್ಲ.

ಅಧ್ಯಕ್ಷರು : ನನ್ನ ವ್ಯಾಪ್ತಿಯಲ್ಲಿ ಬರದೇ ಇರುವುದಕ್ಕೆ ನಾನು ಪ್ರವೇಶ ಮಾಡುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ನಾನು ಹೇಳುವುದು ಏನೆಂದರೆ, ಯಾವುದೇ ರಿಪೋರ್ಟ್ ಬಂದರೆ, ಆಕ್ಷನ ಟೇಕನ ಎಂದು ಸರ್ಕಾರದವರು ಪ್ಯಾರಾವೈಸ್ ಎಲ್ಲಾ ರಿಮಾರ್ಕ್ಸ್ ಕೇಳುತ್ತಾರೆ, ನೋಡುತ್ತಾರೆ. ನೋಡಿ ಆಮೇಲೆ, ಯಾವುದನ್ನು ಇವರಿಗೆ ಮೀರಿ, ಇವರ ಕೈಯಲ್ಲಿ ಆಗುವುದಿಲ್ಲ ಅಥವಾ ಇವರ ಪರ್‌ವ್ಯೂನಲ್ಲಿ ಬರುವುದಕ್ಕೆ ಸಾಧ್ಯವಿಲ್ಲ. ಯಾವುದೋ ಇಂಟರ್‌ಸ್ಟೇಟ್ ಬರಬಹುದು ಅಥವಾ ಬೇರೆ ಏನಾದರೂ ನ್ಯಾಯವನ್ನು ಇಲ್ಲಿ ಬಗೆಹರಸಲಿಕ್ಕೇ ಸಾಧ್ಯವಿಲ್ಲ ಎನ್ನತಕ್ಕಂಥ ಪರಿಸ್ಥಿತಿಗಳು ಇದ್ದರೆ, ಅದು ಬೇರೆ. ಇವರು ಅದರ ಮೇಲೆ ಆಕ್ಷನ ಏನು ತೆಗೆದುಕೊಂಡಿದ್ದಾರೆ ಎನ್ನತಕ್ಕಂಥಾದ್ದೇ ಇಲ್ಲ. ಸಡನ್ ಆಗಿ, ಇನ್ನೂ ಆ ರಿಪೋರ್ಟ್ ಬಗ್ಗೆ ಜನರಲ್ ಆಗಿ ಪ್ರಸ್ತಾಪ ಮಾಡಿದರು. ಕೊನೆಯದಾಗಿ ಅದ ಮೂಲೆಗೆ ಬಿದ್ದಿದ್ದು ಧೂಳು ಮೆತ್ತಿಕೊಂಡಿದ್ದನ್ನು ಕೈಯಲ್ಲಿ ತೆಗೆದುಕೊಂಡುಬಂದು ಇದನ್ನು ಸಡನ್ ಆಗಿ, 92-93, 93-94ರದು ಮಾತ್ರ ನೀವು ತೆಗೆದುಕೊಳ್ಳಬೇಕು ಎನ್ನತಕ್ಕಂಥಾದ್ದು ಹೇಳಿದ ಮೇಲೆ, ಅದಕ್ಕೆ ಅವರು ಸಡನ್ ಆಗಿ ಒಪ್ಪಿಕೊಳ್ಳಬೇಕು ಎಂದರೆ, ಇದು ಏನು ಅರ್ಥ? ನೀನು ಕೊಡದಹಾಗೆ ಮಾಡು, ನಾನು ಅತ್ತಹಾಗೆ ಮಾಡುತ್ತೇನೆ ಎನ್ನತಕ್ಕಂಥ ಒಂದು

ರೀತಿಯಲ್ಲಿ ಅದು ನಡೆಯಿತು. ಇದು ಆಗಬಾರದು. ನಮ್ಮ ನಂಜೇಗೌಡರು ಹೇಳಿದಹಾಗೆ, ಒಂದು ಪಾಲಿಸಿಮಾಡಿ. ಯಾವುದೇ ಇಂತಹ ರಿಪೋರ್ಟ್‌ಗಳು ಬಂದರೆ, ಎಲ್ಲವನ್ನೂ ಕೂಡ ನಮ್ಮ ಕೈಯಲ್ಲಿ ಆಗುವುದಿಲ್ಲ, ಸಿ.ಬಿ.ಐ.ಗೇ ಕಳುಹಿಸುತ್ತೇವೆ ಎಂದರೆ, ಕಳುಹಿಸಿ ಏಕೆಂದರೆ ಎಲ್ಲರದ್ದೂ ಹೋಗುತ್ತವೆ, ಅದೂ ಹೋಗಲಿ. ಮೊದಲಿನಿಂದಲೂ ಅದೇ ಪದ್ಧತಿಯನ್ನು ನೀವು ಮಾಡಿಕೊಂಡು ಇಲ್ಲ, ಇನ್ನು ಮೇಲೆ ನಮ್ಮ ಪದ್ಧತಿ ಇದು ಎನ್ನತಕ್ಕದ್ದು ನಿಮ್ಮ ತೀರ್ಮಾನ ಇದ್ದರೆ, ಅದೂ ಚಿಂತೆ ಇಲ್ಲ. ಇನ್ನು ಮೇಲೆ ಈ ಸರ್ಕಾರ ಬಂದಮೇಲೆ, ಈ ಸರ್ಕಾರದ ಹತ್ತಿರ ಪೋಲೀಸರು ಇಲ್ಲ, ಅಥವಾ ಈ ಸರ್ಕಾರದ ಹತ್ತಿರ ಲೋಕಾಯುಕ್ತನು ಇಲ್ಲ, ಈ ಸರ್ಕಾರದ ಹತ್ತಿರ ಸಿ.ಓ.ಡಿ.ಗಳು ಇಲ್ಲ. ಆಕ್ಷನ್ ತೆಗೆದುಕೊಳ್ಳುವುದಕ್ಕೆ ಅಥವಾ ಇವರು ಸ್ವತಃ ಸಮರ್ಥರಲ್ಲ. ಕಂಪ್ಲೀಟ್ ಅವರು ಫೇಲ್ಯೂರ್ ಆಗಿದ್ದಾರೆ ಎನ್ನತಕ್ಕಂಥ ಭಾವನೆ ಅವರಿಗೇ ಬಂದಿದ್ದರೆ, ಇದನ್ನು ನೇರವಾಗಿ ಸಿ.ಬಿ.ಐ.ಗೆ ರೆಫರ್ ಮಾಡಿ. ತೊಂದರೆ ಇಲ್ಲ. ಏಕೆಂದರೆ, ಅದೇನೋ ಹೇಳುತ್ತಾರಲ್ಲಾ, ಉಪ್ಪು ತಿಂದವನು ನೀರು ಕುಡಿಯಲೇ ಬೇಕು ಎಂದು ಹಾಗೆ ಅದು ಆಗಲಿ. ಆದರೆ ಪೊಲಿಟಿಕಲಿ ಮೋಟಿವೇಟೆಡ್ ರೆಕಮೆಂಡೇಷನ್ ಇದು. ಏಕೆಂದರೆ ಅಲ್ಲಿ ಒಬ್ಬರು ಹಾಸನದವರೇ ಇದ್ದಾರೆ. ಇನ್ನೊಬ್ಬರಿಗೆ ಖುಷಿ ಪಡಿಸುವುದಕ್ಕೋಸ್ಕರ, ನಾನು ಹೇಳಬೇಕಾಗುತ್ತದೆ. xx ಅಲ್ಲಿ ಸಿ.ಬಿ.ಐ. ಅವರ ಕಂಟ್ರೋಲ್‌ನಲ್ಲಿ ಇರುವುದರಿಂದ, ಇದಕ್ಕೆ ಅನುಕೂಲ ಆಗುತ್ತದೆಯೋ ಏನೋ ಎಂದು ಹೇಳಿ ಈ ರೀತಿಯಿಂದ ನೀವು ಕೊಟ್ಟರೆ, ಇವತ್ತು ನೀವು ಮಾಡುತ್ತೀರಿ. ನಾಳೆ ಅಧಿಕಾರಕ್ಕೆ ಇನ್ನೊಬ್ಬರು ಬರುತ್ತಾರೆ. ಏನು ಇದೇ ರೀತಿಯಾಗಿ ಪೊಲಿಟಿಕಲ್ ವೆಂಜೆನ್ಸ್ ತೆಗೆದುಕೊಳ್ಳುವುದಕ್ಕೆ ಈ ಒಂದು ಅಸೆಂಬ್ಲಿಯನ್ನು, ಈ ಒಂದು ಫ್ಲೋರನ್ನು ಉಪಯೋಗ ಮಾಡುತ್ತೀರೋ? ಒಬ್ಬರ ಮೇಲೊಬ್ಬರು ದ್ವೇಷ ಸಾಧಿಸುವುದಕ್ಕೆ, ಅಥವಾ ಒಬ್ಬರಮೇಲೆ ಒಬ್ಬರ ವಿರೋಧ, ಎತ್ತಿಕಟ್ಟುವುದಕ್ಕೆ ಅವರನ್ನು ರಾಜಕೀಯವಾಗಿ ಮುಗಿಸುವುದಕ್ಕೆ ನೀವು ಇದನ್ನು ಮಾಡಿದರೆ, ಈ ಫೋರಮ್ ಅನ್ನು ಯೂಸ್ ಮಾಡಿಕೊಳ್ಳುವ ಹಾಗಿದ್ದರೆ ಮಾಡಿಕೊಳ್ಳಿ. ಮುಂದೆ ನೀವೂ ಅದೇರೀತಿಯಲ್ಲಿ ಫೇಸ್ ಮಾಡಬೇಕಾಗುತ್ತದೆ. ಸಮಯ ಬಂದಾಗ ನೋಡೋಣ. ಆದರೆ ಆ ರೀತಿಯಾಗಿ, ತಾವು ದಯವಿಟ್ಟು ಇದಕ್ಕೆ ಅವಕಾಶ ಕೊಡಬಾರದು. ಸರ್ಕಾರ ಕೂಡ ಇದರ ಬಗ್ಗೆ ಮರುಪರಿಶೀಲನೆ ಮಾಡಬೇಕು, ಮರುಚಿಂತನೆಯನ್ನು ಮಾಡಬೇಕು. ಇಲ್ಲದಿದ್ದರೆ ಇನ್ನುಮೇಲೆ ಎಲ್ಲವನ್ನೂ ಕೂಡ ಅದೇರೀತಿಯಾಗಿ ಮಾಡಬೇಕಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಸನ್ಮಾನ್ಯ ಅಧ್ಯಕ್ಷರೇ, ನಿನ್ನೆ ಅಂದಾಜು ಸಮಿತಿಯ ವಿಚಾರವನ್ನು ಪ್ರಸ್ತಾಪ ಮಾಡಿದಾಗ, ಅದರ ಪ್ರತಿಯನ್ನು ಸಿ.ಬಿ.ಐ.ಗೆ ರೆಫರ್ ಮಾಡಿ ಎಂದು ಈ ಸಮಿತಿಯವರು ಸರ್ಕಾರದ ಗಮನಕ್ಕೆ ತಂದಾಗ, ನಿಜವಾಗಿಯೂ ಸರ್ಕಾರ ಇಷ್ಟೊಂದು ಪ್ರಾಮಾಣಿಕವಾಗಿದೆಯಲ್ಲಾ ಎಂದು ನನಗೆ ಸಂತೋಷ ಕೂಡ ಆಗಿತ್ತು. ಏಕೆಂದರೆ ಒಂದೊಂದು ಸಮಿತಿಯವರು ಬಹಳ ಕಷ್ಟಪಟ್ಟು ಸರ್ಕಾರಕ್ಕೆ ಒಂದು ವರದಿಯನ್ನು ಮಂಡನೆ ಮಾಡಿ, ಅದನ್ನು ಎಕ್ಸಿಕ್ಯೂಟ್ ಮಾಡಬೇಕು ಎನ್ನುವಂಥ ಆಸೆಯಿಂದಲೇ ಪ್ರಯತ್ನ ಮಾಡಿ, ಆ ಒಂದು ಅಂದಾಜು ಸಮಿತಿ ವರದಿಯನ್ನು ಮಂಡನೆ ಮಾಡಿದಾಗ, ಸಿ.ಬಿ.ಐ.ಗೆ ರೆಫರ್ ಮಾಡುವುದಕ್ಕೆ ಒಪ್ಪಿಕೊಂಡಿದ್ದು ನೋಡಿ ತುಂಬಾ ಸಂತೋಷ ಆಯಿತು. ಏಕೆಂದರೆ ಗ್ರಾನೈಟ್ ಕಮಿಟಿಯಲ್ಲಿ ನಾನೂ ಕೂಡ ಇದ್ದೆ.

---

xx ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಗ್ರಾನೈಟ್ ಕಮಿಟಿ ಇಡೀ ರಾಜ್ಯ ಮತ್ತು ದೇಶವನ್ನು ಕೂಡ ಸುತ್ತಿಕೊಂಡು ಬಂದಿದೆ. ಹೀಗೆ ಸುತ್ತಿಕೊಂಡು ಬಂದು ಅನೇಕ ಸಲಹೆಗಳನ್ನು ಈ ಸಮಿತಿಯಿಂದ ರಾಜ್ಯಸರ್ಕಾರಕ್ಕೆ ನಾವು ಕೊಟ್ಟಿದ್ದೇವೆ. ನಿಜಕ್ಕೂ ಇವರ ಪ್ರಾಮಾಣಿಕತೆ, ಈ ರೀತಿ ಸಮಿತಿ ಕೊಟ್ಟಂಥ ವರದಿಯಲ್ಲಿ ಏನೇನು ಸಲಹೆಗಳನ್ನು ಸರ್ಕಾರಕ್ಕೆ ಕೊಟ್ಟಿದೆ, ಆ ಸಲಹೆಗಳನ್ನು ಇಂಪ್ಲಿಮೆಂಟ್ ಮಾಡುವ ದಿಕ್ಕಿನಲ್ಲಿ ರಾಜ್ಯಸರ್ಕಾರ ಪ್ರಯತ್ನ ಮಾಡುತ್ತಾ ಇದೆ ಎಂದು ತೀರ್ಮಾನ ಆಗಬೇಕಾದರೆ, ಸರ್ಕಾರಕ್ಕೆ ನಿಜವಾಗಿಯೂ ಪ್ರಾಮಾಣಿಕತೆ ಇದೆ ಎಂದು ರಾಜ್ಯದ ಜನತೆಗೆ ತೋರಿಸಬೇಕಾದರೆ, ಗ್ರಾನೈಟ್ ಕಮಿಟಿ ಕೊಟ್ಟಿರತಕ್ಕಂಥ ಒಂದು ವರದಿಯಲ್ಲಿ ಏನೇನು ಸಲಹೆಗಳನ್ನು ರಾಜ್ಯಸರ್ಕಾರಕ್ಕೆ ಕೊಟ್ಟಿದೆಯೋ, ಆ ವರದಿಯನ್ನು ಕೂಡ ರಾಜ್ಯಸರ್ಕಾರದ ಅಷ್ಟೇ ಪ್ರಾಮಾಣಿಕತೆಯಿಂದ ಜಾರಿಗೆ ತರುತ್ತದೆಯೇ ಎನ್ನತಕ್ಕಂಥ ಪ್ರಶ್ನೆಯನ್ನು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಕೇಳುವುದಕ್ಕೆ ಇಚ್ಛಿಪಡುತ್ತೇನೆ. ಇಲ್ಲ ಎಂದರೆ ತುಂಬಾ ಸ್ಪಷ್ಟವಾಗುತ್ತದೆ, ಯಾವುದೋ ಒಬ್ಬ ವ್ಯಕ್ತಿಯನ್ನು ಬಳಸಿಕೊಂಡು, ಇಡೀ ಸದನ ಇದನ್ನು ದುರುಪಯೋಗ ಮಾಡಿಕೊಳ್ಳುವುದಕ್ಕೋಸ್ಕರ ಈ ಸರ್ಕಾರ ಮಾಡಿಕೊಳ್ಳುತ್ತದೆ, ಮತ್ತು ಆವಾಗ ಇಡೀ ಸದನ ಈ ರೀತಿ ದುರ್ಬಳಕೆ ಮಾಡಿಕೊಂಡಿರುವ ಸರ್ಕಾರಕ್ಕೆ ಖಂಡನೆ ಮಾಡತಕ್ಕಂಥ ವಿಚಾರವನ್ನೂ ಕೂಡ ಮಂಡನೆ ಮಾಡಬೇಕಾಗುತ್ತದೆ. ಅದಕ್ಕೋಸ್ಕರ ನಾನು ಸಂಬಂಧಪಟ್ಟ ಮಂತ್ರಿಗಳನ್ನು ಕೇಳುವುದಕ್ಕೆ ಇಚ್ಛಿಪಡುತ್ತೇನೆ, ಒಂದು ಅಂದಾಜು ಸಮಿತಿಯ ವರದಿಯನ್ನು ತಾವು ಯಾವರೀತಿ ಇಂಪ್ಲಿಮೆಂಟ್ ಮಾಡಿದ್ದೀರೋ, ಅದರ ಬಗ್ಗೆ ಚರ್ಚೆ ಮಾಡುವುದಕ್ಕೂ ಅವಕಾಶ ಕೊಡಬೇಕು. ಅದೇರೀತಿ ಗ್ರಾನೈಟ್ ಕಮಿಟಿ ಏನು ಸಲಹೆಗಳನ್ನು ಕೊಟ್ಟಿದೆ, ಆ ಸಲಹೆಗಳಲ್ಲಿ ಏನೇನು ಅನ್ಯಾಯವಾಗಿದೆ, ಭ್ರಷ್ಟಾಚಾರಗಳು ಆಗಿವೆ, ಅದನ್ನು ತಡೆಗಟ್ಟುವುದಕ್ಕೋಸ್ಕರ ಏನೇನು ಮಾಡಬೇಕೆಂದು ಸಲಹೆಗಳನ್ನ ಕೊಟ್ಟಿದೆ. ಆ ಸಲಹೆಗಳನ್ನೂ ಕೂಡ ಇಂಪ್ಲಿಮೆಂಟ್ ಮಾಡುವ ದಿಕ್ಕಿನಲ್ಲಿ ಕೂಡ ಸರ್ಕಾರ ಖಂಡಿತವಾಗಿಯೂ ಪ್ರಯತ್ನ ಮಾಡುತ್ತದೆಯೇ ಎನ್ನುವ ವಿಚಾರವನ್ನು ಕೂಡ ಹೇಳಬೇಕಾಗುತ್ತದೆ.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೇ, ನಿನ್ನೆ ಈ ಸದನದಲ್ಲಿ ಮಾನ್ಯ ಶಿವಕುಮಾರ್ ಅವರು ಈ ಸದನದ ಸಮಿತಿಯ ಒಂದು ವರದಿಯ ಬಗ್ಗೆ ಚರ್ಚೆ ಮಾಡಿ, ಈ ಒಂದು ಆರೋಗ್ಯ ಇಲಾಖೆಯಲ್ಲಿ ಔಷಧಿಗಳ ಖರೀದಿ ಮತ್ತು ಉಪಕರಣಗಳ ಖರೀದಿ ಬಗ್ಗೆ ಭಾರಿ ಪ್ರಮಾಣದ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ನಡೆದಿದೆ, ಎಂದು ಹೇಳುತ್ತಾ ಇರತಕ್ಕಂಥ ವರದಿಯನ್ನು ಸದನಕ್ಕೆ ಸಲ್ಲಿಸಿದ್ದುದು ನಮಗೆಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ಮತ್ತು ಈ ಔಷಧಿಗಳ ವಿತರಣೆ ಯಾವುದಿದೆ, ಇದು ಕರ್ನಾಟಕ ರಾಜ್ಯದಲ್ಲಿರತಕ್ಕಂಥ ವಿತರಣೆಕಾರರು ಅಲ್ಲ, ರಾಜ್ಯದ ಹೊರಗಡೆ ಇರತಕ್ಕಂಥವರು ಇದ್ದಾರೆ. ಮತ್ತು ಆರೋಗ್ಯ ಇಲಾಖೆಗೆ ಇವರು ಯಾವ ಉಪಕರಣಗಳನ್ನು ಕೊಟ್ಟಿದ್ದಾರೆ ಆ ಉಪಕರಣಗಳು, ನಾನಾ ಭಾಗಗಳಿಂದ ಕೊಟ್ಟಿರತಕ್ಕಂಥಾದ್ದು ಕೂಡ ಇವೆ. ಕಲ್ಕತ್ತಾದಿಂದ, ಮುಂಬಯಿಯಿಂದ, ಮದ್ರಾಸಿನಿಂದ ಬಂದಿರತಕ್ಕಂಥ ಉಪಕರಣಗಳು. ಅವೆಲ್ಲವೂ ಬಹಳ ಕಳಪೆಮಟ್ಟದ ಉಪಕರಣಗಳು ಆಗಿದ್ದು, ಅವುಗಳ ಕ್ರಯದಲ್ಲಿ ಇರತಕ್ಕಂಥ ವ್ಯತ್ಯಾಸ ಹುಡುಕಿದಾಗ, ಕೆಲವು ಸಂದರ್ಭಗಳಲ್ಲಿ ಹತ್ತು ರೂಪಾಯಿ ಇರತಕ್ಕಂಥಾದ್ದಕ್ಕೆ 110 ರೂಪಾಯಿ ಮಾಡಿರತಕ್ಕಂಥಾದ್ದು, 30 ರೂಪಾಯಿ ಇದ್ದುದಕ್ಕೆ 230 ರೂಪಾಯಿ ಮಾಡಿರತಕ್ಕಂಥಾದ್ದು ಇದ್ದು, ಹೀಗೆ ಕೋಟ್ಯಾಂತರ

ರೂಪಾಯಿಗಳ ಅವ್ಯವಹಾರವನ್ನು ಔಷಧಿಗಳ ಖರೀದಿಯಲ್ಲಿ ಮತ್ತು ಉಪಕರಣಗಳ ಖರೀದಿಯಲ್ಲಿ ಆಗಿದೆ ಎಂದು ಹೇಳಿ ಸದನದ ಸಮಿತಿಯವರು ಕೂಲಂಕಷವಾಗಿ ಚರ್ಚೆಮಾಡಿಯಾದಮೇಲೆ ಸಂಬಂಧಪಟ್ಟಂಥ ಅಧಿಕಾರಿಗಳ ಬಗ್ಗೆ ಮತ್ತು ಇದರಲ್ಲಿ ಯಾರ್ಯಾರು ತಪ್ಪಿತಸ್ಥರು ಇದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ವರದಿಯನ್ನು ಕೊಟ್ಟಿದ್ದಾರೆ. ಆದರೆ ಈ ವ್ಯವಹಾರದಲ್ಲಿ ಕರ್ನಾಟಕದ ಒಳಗಡೆ ಇರತಕ್ಕಂಥ ವಿತರಣಕಾರರು ಮಾತ್ರ ಭಾಗಿಗಳಾಗಿಲ್ಲ, ರಾಜ್ಯದ ಹೊರಗಡೆ ಇರತಕ್ಕಂಥವರೂ ಕೂಡ ಇದರಲ್ಲಿ ಭಾಗಿಗಳಾಗಿದ್ದಾರೆ ಎನ್ನತಕ್ಕಂಥಾದ್ದು ಇದರಲ್ಲಿ ಬಂದಿದೆ. ಅಂತಹ ಸಂದರ್ಭದಲ್ಲಿ, ಇಷ್ಟು ದೊಡ್ಡ ಪ್ರಮಾಣದಲ್ಲಿ ಆಗಿರತಕ್ಕಂಥ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ನಡೆದಿರತಕ್ಕಂಥಾದ್ದು, ಇದನ್ನು ತಾವು ದಯವಿಟ್ಟು ಸಿ.ಬಿ.ಐ.ಗೆ ಒಪ್ಪಿಸಬೇಕು ಎಂದು ಹೇಳುತ್ತಾ ಇರತಕ್ಕಂಥ ವಿಚಾರವನ್ನು ಮಾಡಿದಾಗ ಮಾನ್ಯ ಮುಖ್ಯಮಂತ್ರಿಗಳು ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ಆಗಿದೆ, ಮತ್ತು ಇದು ನಮ್ಮ ರಾಜ್ಯ ಮತ್ತು ಇತರ ರಾಜ್ಯಗಳಲ್ಲಿ ಈ ಖರೀದಿ ಮಾಡಿರತಕ್ಕಂಥ ಔಷಧಿ ಮತ್ತು ಉಪಕರಣಗಳು ಇರುವಾಗ, ಇದರ ಬಗ್ಗೆ ಒಂದು ವ್ಯಾಪಕವಾದಂಥ ವಿಚಾರಣೆ ನಡೆಯುವುದಾದರೆ ನಡೆಯಲಿ. ನಾವು ರಾಜ್ಯ ಸರ್ಕಾರ ಯಾವುದನ್ನು ಮುಚ್ಚಿಡುವುದಕ್ಕೆ ತಯಾರಾಗಿಲ್ಲ ಎನ್ನತಕ್ಕ ವಿಚಾರದ ಹಿನ್ನೆಲೆಯಲ್ಲಿ, ಅವರು ಎತ್ತಿರತಕ್ಕಂಥ ವಿಚಾರಕ್ಕೆ ಆಯಿತು.

4.30 ಪಿ.ಎಂ.

ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ನಡೆದಿದೆ ಎನ್ನುವುದನ್ನು ಸದನದ ಸಮಿತಿಯಲ್ಲಿ ಗುರುತು ಮಾಡಿರತಕ್ಕಂಥ ಈ ಸಂದರ್ಭದಲ್ಲಿ ಇದರ ಬಗ್ಗೆ ತನಿಖೆ ನಡೆಯಲಿ ಎನ್ನತಕ್ಕಂಥ ವಿಚಾರವನ್ನು ಅವರು ಎತ್ತಿದಾಗ, ಮಾನ್ಯ ಮುಖ್ಯಮಂತ್ರಿಗಳು ಆಯಿತು ಇದನ್ನು ಒಪ್ಪಿಸುತ್ತೇವೆಂದು ಹೇಳಿದ್ದಾರೆ. ಮಾನ್ಯ ಖರ್ಗೆಯವರಲ್ಲಿ, ನಾನು ಒಂದನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಏತಕ್ಕೋಸ್ಕರ ಇವತ್ತು ಅವರು ಪ್ರಧಾನಿಯವರ ಹೆಸರನ್ನು ಬಳಸಬೇಕಾಗಿತ್ತೋ ಅದು ನನಗೆ ಗೊತ್ತಾಗಲಿಲ್ಲ. ತಾವು ಈ ವಿಚಾರವನ್ನು ಸಿ.ಬಿ.ಐ.ಗೆ ಒಪ್ಪಿರತಕ್ಕಂಥಾದ್ದು ಏನೋ ಎಂದು ಹೇಳಿ ಸ್ವಲ್ಪಮಟ್ಟಿಗೆ ಅಳುಕ್ಕಿದ್ದರು ಬೇಡ ಎಂದು. ಇಲ್ಲ ಹೇಳಲೇಬೇಕೆಂದು ಹೇಳಿ ಪ್ರಧಾನಿಗಳನ್ನು ಖುಷಿಪಡಿಸುವುದಕ್ಕೋಸ್ಕರ. ಮಾನ್ಯ ಸಭಾಧ್ಯಕ್ಷರೇ, ಪ್ರಧಾನಿಗಳ ಹೆಸರಿನಲ್ಲಿ ತರಬೇಕಾದಂಥ ಅವಶ್ಯಕತೆ ಇಲ್ಲ. ಈ ಸದನದಲ್ಲಿ ನಾವು ಚರ್ಚೆ ಮಾಡಿ, ನಮ್ಮ ಸಮಿತಿ ಎತ್ತಿರತಕ್ಕ ವಿಷಯದ ಬಗ್ಗೆ, ನಮ್ಮ ಮುಖ್ಯಮಂತ್ರಿಗಳು ತೆಗೆದುಕೊಳ್ಳಬೇಕಾಗಿರತಕ್ಕಂಥ ಕ್ರಮ. ಏನು, ಈ ಸದನದಲ್ಲಿ ಕ್ರಮ ತೆಗೆದುಕೊಳ್ಳಬೇಕಾದ ಅವಶ್ಯಕತೆಯೂ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಇದನ್ನು ಸಿ.ಬಿ.ಐ.ಗೆ ವಹಿಸಬೇಕೆಂದು ಹೇಳುವಂತಾದ್ದು ಸದನದ ಹೊರಗಡೆ ಆಡಳಿತಾತ್ಮಕವಾಗಿ ಅವರಿಗೆ, ಈ ರೀತಿ ಕೊಡತಕ್ಕಂಥ ಅಧಿಕಾರವೂ ಇದೆ. ಆಡಳಿತಾತ್ಮಕವಾಗಿ ಕೊಟ್ಟಿರತಕ್ಕ ಈ ವಿಚಾರದಲ್ಲಿ ಆ ದಿವಸ ಸದನದಲ್ಲಿ ಈ ವಿಚಾರವನ್ನು ಎತ್ತಿದಾಗ, ಸರ್ಕಾರ ನಿಷ್ಕ್ರಿಯವಾಗಿ ಕೂಡಲೇಬಾರದು, ನಾವು ಸ್ಪಂದನ ಮಾಡುತ್ತೇವೆಂಬ ಮಾತನ್ನು ಹೇಳಿ, ಮಾನ್ಯ ಮುಖ್ಯಮಂತ್ರಿಗಳು ಇದನ್ನು ಒಪ್ಪಿಸಿದ ಮೇಲೆ, ಬಹುಶಃ ನಿನ್ನೆ ಇದನ್ನು ಒಪ್ಪಿಸಿ ಆಯಿತು. ಇವತ್ತು ಇದರ ಬಗ್ಗೆ ಚರ್ಚೆ ಮಾಡುತ್ತಾ, ಸ್ವಲ್ಪಮಟ್ಟಿಗೆ ಏಕೆ ಒಪ್ಪಿಸಿದರು, ಏನಾಯಿತು ಎಂದು ಹೇಳುತ್ತಾ, ಇವತ್ತು

ಸ್ವಲ್ಪಮಟ್ಟಿಗೆ ಬೆಳಕಾದ ಮೇಲೆ, ಇದಕ್ಕೆ ಕಾಲು, ಕೈ, ರಾಜಕೀಯ ಎಲ್ಲಾ ಇದಕ್ಕೆ ಬಂತು ಎಂದು ಕಾಣುತ್ತದೆ. ಆದರೆ, ನಮಗೆ ಗೊತ್ತಿಲ್ಲ. ನಾವೇನೂ ಇದರ ಬಗ್ಗೆ ರಾಜಕೀಯವಾಗಿ ಯೋಚನೆ ಮಾಡಿಲ್ಲ. ಆದ್ದರಿಂದ ತಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಿನ್ನೆ ಇದು ಗೊತ್ತೇ ಆಗಲಿಲ್ಲ. ಯಾರೋ ರೈಸ್ ಮಾಡಿದಹಾಗೆ ಮಾಡಿದರು, ಹೇಗೋ ಬಿಟ್ಟಹಾಗೆ ಆಯಿತು. ಆಗ ಸಚಿವರು ಯಾರು ಇದ್ದರು ಸ್ವಲ್ಪ ಹೇಳಿ. ಆರೋಗ್ಯ ಸಚಿವರು ಇದ್ದರೇ ಎಂಬುದನ್ನು ಸ್ವಲ್ಪ ತಾವು ಹೇಳಿ. ಅವರ ಹೆಸರು ಹೇಳಿಬಿಟ್ಟರೆ, ಖಿರ್ಗೆಯವರು ಹೇಳಿದ್ದಕ್ಕೆ ಸಮರ್ಥನೆಯಾಗುತ್ತದೆ. ಯಾರು ಇದ್ದರು ಎಂದು ಹೇಳಿ.

ಮಾನ್ಯ ಸದಸ್ಯರು : ವರದಿ ಕೊಟ್ಟವರು ಯಾರು ನೋಡಿ...

ಶ್ರೀ ವಾಟಾಳ್ ನಾಗರಾಜ್: ವರದಿ ಕೊಟ್ಟವರು ಯಾರು, ಆಗ ಆರೋಗ್ಯ ಸಚಿವರಾಗಿದ್ದವರು ಯಾರು, ಇದೆಲ್ಲಾ ನೋಡಿದರೆ ಆಗ, ಬೇಲಿಯಿಂದ ಹೊರಗಡೆ ಬರುತ್ತದೆ. ತಾವು ಸತ್ಯ ಹೇಳಿ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೇ, ನನ್ನ ಆಕ್ಷೇಪ, ಮಾನ್ಯ ಪ್ರಧಾನಿಗಳ ಹೆಸರನ್ನು, ಮಾನ್ಯ ವಿರೋಧಪಕ್ಷದ ನಾಯಕರು ಎತ್ತಿ, ಪ್ರಧಾನಿಗಳನ್ನು ಸಂತೋಷಪಡಿಸಲಿಕ್ಕೋಸ್ಕರ ಎಂದು ಹೇಳತಕ್ಕಂಥಾದ್ದು. ನಾನು ನಿಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಇದು ಸದನದ ರೆಕಾರ್ಡ್‌ಗೆ ಹೋಗಿರುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅವರು ಹೇಳಿರುವುದು ಸರಿ. ಅವತ್ತು ಪುಟ್ಟಸ್ವಾಮಿಗೌಡರು ಆರೋಗ್ಯ ಸಚಿವರಾಗಿದ್ದರು. ಅದಕ್ಕೋಸ್ಕರ ಅವರು ಹೇಳುತ್ತಾರೆ. ಪುಟ್ಟಸ್ವಾಮಿಗೌಡರು ಆರೋಗ್ಯ ಸಚಿವರು ಅಷ್ಟೇ, ಅಲ್ಲಿ ರಾಜಕಾರಣ. ಇನ್ನೇನೂ ಇಲ್ಲ. ದೇಶದ್ದಲ್ಲ ಅಥವಾ ಅದು ರಾಜ್ಯದ ಉದ್ಧಾರ ಅಲ್ಲ.

(ಗೊಂದಲ)

ಶ್ರೀ ಎಂ. ಸಿ. ನಾಣಯ್ಯ : ಪ್ರಧಾನಿಗಳ ಹೆಸರನ್ನು ತಂದು ಏತಕ್ಕೋಸ್ಕರ ರಾಜಕೀಯ ಮಾಡುತ್ತೀರಿ? ನೀವು ರಾಜಕೀಯ ಮಾಡುವುದಾದರೆ, ನೀವು ಪ್ರತಿಯೊಂದರಲ್ಲೂ ದಯವಿಟ್ಟು ರಾಜಕೀಯವನ್ನು ನೋಡಲೇಬೇಕು. ಪ್ರತಿಯೊಂದರಲ್ಲೂ ರಾಜಕೀಯವನ್ನು ನೋಡತಕ್ಕ ಪರಿಸ್ಥಿತಿಯನ್ನು ನಿರ್ಮಾಣ ಮಾಡಬೇಡಿ. ಈ ಸದನದಲ್ಲಿ ತೀರ್ಮಾನ ತೆಗೆದುಕೊಂಡ ಮೇಲೆ, ಇವತ್ತು ಅದಕ್ಕೆ ಒಂದು ಬಣ್ಣವನ್ನು ಕಟ್ಟಿ, ಯಾರಿಗೋ ಖುಷಿಪಡಿಸುವುದಕ್ಕೋಸ್ಕರ ಎಂದು ಹೇಳುತ್ತಾ, ಪ್ರಧಾನಿಗಳ ಹೆಸರನ್ನು ನೀವು ಏತಕ್ಕೋಸ್ಕರ ಹೇಳುತ್ತೀರಿ?. ಆದರೆ, ಎಲ್ಲೋ ಒಂದುಕಡೆ ರಾಜಕೀಯವನ್ನು ಮಾಡಬೇಕೆಂಬ ನಿಮ್ಮ ಮನಸ್ಸಿನ ಚಿಂತನೆ ಇದೆಯಲ್ಲಾ, ಈ ರಾಜಕೀಯ ಮಾಡಿಕೊಂಡೇ ನಿಮ್ಮ ಜೀವನ ಆಗಿಬಿಟ್ಟಿದೆ. ದಯವಿಟ್ಟು ಅದನ್ನು ಬಿಡಿ. ಆದ್ದರಿಂದ ನಾನು ಸಭಾಧ್ಯಕ್ಷರನ್ನು ಕೇಳುತ್ತಿದ್ದೇನೆ. ಪ್ರಧಾನಿಗಳ ಹೆಸರನ್ನು

ಬಳಸತಕ್ಕಂಥಾದ್ದು ಸರಿಯಲ್ಲ. ಇದು ನಮ್ಮ ಸತ್ಸಂಪ್ರದಾಯವೂ ಅಲ್ಲ. ದಯವಿಟ್ಟು ಆ ವಿಷಯವನ್ನು ಕಡತದಿಂದ ತೆಗೆಸಬೇಕೆಂದು ತಮ್ಮನ್ನು ವಿನಯದಿಂದ ಕೇಳಿಕೊಳ್ಳುತ್ತೇನೆ.

MR. SPEAKER : Propriety demands that. ಉಳಿದಿದ್ದು, ತಾವು ಹೇಳಿದ್ದೆಲ್ಲಾ ಇರಲಿ. ಪ್ರಧಾನಿಗಳ ರೆಫರೆನ್ಸ್ ಮಾಡಿದ್ದುದು ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದನ್ನು ತೆಗೆಯಬೇಕಾದರೆ ತೆಗೆಯಿರಿ, ಅದು ತಮಗೆ ಬಿಟ್ಟಿದ್ದುದು.

ಅಧ್ಯಕ್ಷರು : ಪ್ರಧಾನಿಗಳ ಹೆಸರನ್ನು ತರುವುದು ಬೇಡ. ಉಳಿದಿದ್ದು ಏನು ಬೇಕಾದರೂ ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ಅವರ ಆತ್ಮಸಾಕ್ಷಿಯಾಗಿ ಹೇಳಲಿ. ಮಾನ್ಯ ಜೆ.ಬಿ. ಶಿವಕುಮಾರ್‌ರವರು ಈಗ ಇರತಕ್ಕ ಅಂದಾಜುಗಳ ಸಮಿತಿಯ ಅಧ್ಯಕ್ಷರು. ಅವರು, ತಾವೇನಾದರೂ ಅಲ್ಲಿ ಕೋಟ್ಯಾಂತರ ರೂಪಾಯಿ ಅವ್ಯವಹಾರ ನಡೆದುದನ್ನು ಕಂಡುಹಿಡಿದು, ಹೊಸ ವರದಿ ಕೊಟ್ಟಿದ್ದು, ನಾವು ಏಕೆ ಕೊಡಬೇಕು ಎಂದು, ಕೇಳಿ ಹೇಳಿದ್ದರೆ ಮತ್ತೆ ಇವತ್ತು ಅವರು ಯಾವುದೇ ಕಮಿಟಿಯಲ್ಲಿ ಇಲ್ಲ. ಅವರಿಗೂ ಸುಮಾರು 12-13 ವರ್ಷದ ಅನುಭವ ಇದ. ಏಕೆಂದರೆ, ಅವರು ವಿಧಾನ ಪರಿಷತ್ತಿನಲ್ಲಿಯೂ ಇದ್ದರು, ಇಲ್ಲಿಯೂ ಇದ್ದಾರೆ. ಎಲ್ಲಾ ಕಡೆ ಇದ್ದರು. ಅಂದಾಗ, ಅವರು ಸಮಿತಿಯ ಅಧ್ಯಕ್ಷರಾಗಿ, ಅವರು ಕೊಟ್ಟಂಥ ರಿಪೋರ್ಟ್ ಏನಾದರೂ ಇದ್ದಿದ್ದರೆ, ಇದು ನಾನು ಕೊಟ್ಟಿದ್ದೇನೆ, ಇದು ಉಪಯೋಗವಾಗುವುದಿಲ್ಲ, ಏಕೆಂದರೆ, ಇದರ ಮೇಲೆ ನೀವು ಕ್ರಮ ತೆಗೆದುಕೊಳ್ಳದೇ ಹೋದರೆ, ನಾವು ಮಾಡಿದಂಥ ಕೆಲಸಕ್ಕೆ ಏನೂ ಬೆಲೆ ಬರುವುದಿಲ್ಲ. ನಾವು ಯಾರೂ ಕೂಡ ಈ ಸಮಿತಿಗೆ ಗೌರವ ಕೊಡುವುದಿಲ್ಲ, ಅದಕ್ಕಾಗಿ ದಯವಿಟ್ಟು ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದರೆ ಎಂದು ತರಹ ಇತ್ತು. ಆದರೆ, ಅವರು ತಮ್ಮ ಕಮಿಟಿ ವರದಿ ಬಿಟ್ಟರು ಅಥವಾ ಅವರಿಗೆ ಏನು ಹೇಳಬೇಕಾಗಿತ್ತೋ ಅದನ್ನು ಬಿಟ್ಟರು, 1992-93ರ ವರದಿಯನ್ನು ಕೈಯಲ್ಲಿ ಹಿಡಿದುಕೊಂಡು ಬಂದು, ಈ ಸದನದಲ್ಲಿ ತೋರಿಸಿ, ಇದರೊಳಗೆ ಹೀಗೆ ಹೀಗೆ ಇದೆ ಎಂದು ಹೇಳಬೇಕೆಂದರೆ, ಅದಕ್ಕೇನು ಕಾರಣ? ಸ್ಪೆಸಿಫಿಕ್ ಆಗಿ ಚರ್ಚೆಗೆ ಹಾಕಿ, ಬೇಕಾದರೆ ಅದಕ್ಕೆ ರೆಫರ್ ಮಾಡಿ ಎಂದು ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ. ತಮ್ಮ ಅನುಮತಿ ಕೇಳಿ ಅರ್ಧಗಂಟೆ ಕಾಲ ಚರ್ಚೆಗೆ ಹಾಕಿ. ಇದರೊಳಗೆ ಇಂಥಿಂಥ ತಪ್ಪುಗಳಾಗಿವೆ, ಇಷ್ಟೊಂದು ದುಡ್ಡು ಹೊಡೆದಿದ್ದಾರೆ, ಅಂಥವರಿಗೆಲ್ಲಾ ಕೂಡ ಶಿಕ್ಷೆ ಕೊಡಬೇಕಾಗಿದೆ. ಅದಕ್ಕಾಗಿ ಇಲ್ಲಿ ಚರ್ಚೆಯಾಗಬೇಕು. ಇದನ್ನು ಚರ್ಚೆ ಮಾಡಿ, ಇದನ್ನು ಶಿಫಾರಸ್ ಮಾಡಿ ಎಂದು ಹೇಳಿದ್ದರೆ, ನಾನು ಒಪ್ಪಿಕೊಳ್ಳುತ್ತಿದ್ದೆ. ಆದರೆ, ತಮ್ಮ ಹೇಳಿಕೆ ಹೇಳುವಾಗ, ನಾನು ಅಧ್ಯಕ್ಷ ಇದ್ದೆ, ನನ್ನ ಅನುಭವಕ್ಕೆ ಬಂದಿದೆ ಎಂದು ಹೇಳಿ, ರೆಫರ್ ಮಾಡಿದ್ದಾರೆ, ಆದರೆ ಒಂದು ಪಾಲಿಸಿ ಮ್ಯಾಟರ್ ಆಗಿ ಎಲ್ಲಾ ವರದಿಯನ್ನು ಮಾಡಿದ್ದರೆ ನಮ್ಮದೇನೂ ಅಭ್ಯಂತರವಿಲ್ಲ. ಬೇಡ ಎಂದು ಹೇಳುವುದೂ ಇಲ್ಲ, ಅದು ತಪ್ಪೂ ಇಲ್ಲ. ನೀವು ಸರ್ಕಾರ ನಡೆಸುತ್ತೀರಿ, ನೀವು ಮಾಡಿಕೊಳ್ಳಿ. ಎಲ್ಲಾ ವರದಿಯನ್ನೂ ಸಿ.ಬಿ.ಐ.ಗೆ ಕಳುಹಿಸುವುದಾದರೆ ಕಳುಹಿಸಿ. ಆದರೆ, ಸ್ಪೆಸಿಫಿಕ್ ಆಗಿ ಅದನ್ನೇ ಬೇಕೆಂದರೆ, ನೀವು ಆತ್ಮಸಾಕ್ಷಿಯಾಗಿ ಹೇಳಿ, ಇವತ್ತಿನ ದಿವಸ ಇದನ್ನು

ಚರ್ಚೆ ಮಾಡಿ, ಫ್ರೀಪ್ಲಾನ್ ಮಾಡಿ ಬೇಕೆಂದೇ ಇದನ್ನು ಸದನದಲ್ಲಿ ತಂದು, ಇದಕ್ಕೆ "ಎಸ್" ಎನ್ನತಕ್ಕಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದವರು, ಅಥವಾ ಶಿಫಾರಸ್ಸು ಮಾಡುತ್ತೇವೆಂದು ಹೇಳತಕ್ಕಂಥವರು ತಾವು. ಇದನ್ನು ನೀವು ಒಪ್ಪಿಕೊಳ್ಳಬೇಕಾಗುತ್ತದೆ. ಆ ದೃಷ್ಟಿಯಿಂದ ನಾನು ಹೇಳಿದೆ. ಏಕೆಂದರೆ, ಇದು ಹಾಸನಕ್ಕೆ ಸಂಬಂಧ ಪಟ್ಟಿದ್ದು ಸಿ.ಬಿ.ಐ. ಕೂಡ ಕೇಂದ್ರಸರ್ಕಾರಕ್ಕೆ ಸಂಬಂಧಪಟ್ಟಿದ್ದು. ಈ ದೃಷ್ಟಿಯಿಂದ ಸ್ವಲ್ಪ ನೆಂಟಸ್ತನ ಇದೆ, ಬೀಗಸ್ತನ ಇದಯೆಂದು ಹೇಳಿ ನಾನು ಹೇಳಿದ್ದೇ ಹೊರತಾಗಿ, ನಾನು ಬೇರೆ ದೃಷ್ಟಿಯಿಂದ ಹೇಳಲಿಲ್ಲ. ಆದಕ್ಕೆ ವಿತ್ ವೆಂಜನ್ಸ್ ಏನು ಆಕ್ಟ್ ಮಾಡುತ್ತಾರೆ ಎಂಬುದು ತಮಗೆ ಗೊತ್ತಿದೆ. ಕೋರ್ಟಿನಲ್ಲಿ ಎಷ್ಟು ಕೇಸಸ್ ಇವೆ. ಲೋಕಾಯುಕ್ತದಲ್ಲಿ ಎಷ್ಟು ಕೇಸ್ ಇದ್ದವು, ಯಾರು ಯಾರು ಯಾವಾಗ, ಯಾವಾಗ ರಿಕ್ವೆಸ್ಟ್ ಮಾಡಿಕೊಂಡು ತಮ್ಮ ಕೇಸನ್ನು ವಾಪಸ್ ತೆಗೆದುಕೊಂಡಿದ್ದಾರೆ. ಇವೆಲ್ಲಾ ಪ್ರತಿಯೊಂದನ್ನೂ ನಾನು ಇಲ್ಲಿ ಹೇಳಲೇ? ಆದರೆ, ನಾವು ಹೇಳುವುದಿಲ್ಲ. ನಮಗೂ ಕೂಡ ಗೊತ್ತಿದೆ. ಆದರೂ ಕೂಡ ಯಾರ ಯಾರ ಗೌರವ ಎಲ್ಲಿ ಇಡಬೇಕೋ ಅಷ್ಟರಮಟ್ಟಿಗೆ ಇಟ್ಟಿದ್ದೇವೆ. ಇದಕ್ಕೂ ಮೀರಿ ನೀವು ಬೇರೆಯವರಿಗೂ ತೊಂದರೆ ಕೊಡತಕ್ಕಂಥಾದ್ದು ವಿತ್ ವೆಂಜನ್ಸ್ ಆಕ್ಟ್, ತಪ್ಪು ಮಾಡಿದ್ದರೆ ಶಿಕ್ಷೆಯಾಗಲೀ, ನಾವು ಬೇಡ ಎಂದು ಹೇಳುವುದಿಲ್ಲ. ನೀವು ವಿತ್ ವೆಂಜನ್ಸ್ ಆಕ್ಟ್ ಮಾಡುತ್ತೇವೆ. ಉದ್ದೇಶಪೂರ್ವಕವಾಗಿ ಇದನ್ನು ಮಾಡುತ್ತೇವೆಂದು ಹೇಳಿದರೆ, ಈ ಸದನವನ್ನು ದುರುಪಯೋಗ ಮಾಡಿಕೊಂಡಹಾಗೆ ಆಗುತ್ತದೆ. ಅದನ್ನೂ ಕೂಡ ತರಾತುರಿಯಲ್ಲಿ, ನಾನು ಒಳಗಡೆ ಬರುತ್ತಾ ಇದ್ದೆ. ಅವರು ಒಂದನ್ನು ಮಾತನಾಡುತ್ತಾ ಇದ್ದರು. ಇದು ಏನಾಯಿತು ಎಂದು ಗೊತ್ತಿಲ್ಲ. ಕೊನೆಗೆ 1993-94 ಎಂದರೆ, ಆಗಲೇ ನಾನು ಒಂದು ಮಾತನ್ನೂ, ಕೂಡಲೇ ಸಾಯಂಕಾಲವೇ ನಾನು ರೀಆಕ್ಟ ಮಾಡಿದೆ. ನಮ್ಮ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಬಂದಾಗ ಇದನ್ನು ರೆಫರ್ ಮಾಡಿದೆ. ಅದಕ್ಕೆ ದಯವಿಟ್ಟು, ರಾಜಕಾರಣ ಮಾಡುವುದಕ್ಕೆ ಹೋಗಬೇಡಿ. ಕ್ರಮ ತೆಗೆದುಕೊಳ್ಳಬೇಕೆಂದರೆ, ನಿಷ್ಪಕ್ಷಪಾತವಾಗಿ ತೆಗೆದುಕೊಳ್ಳಿ. ಯಾರು ತಪ್ಪಿತಸ್ಥರಿದ್ದಾರೆ, ಅವರಿಗೆ ಶಿಕ್ಷೆ ಮಾಡಿ. ಆದರೆ, ವಿತ್ ವೆಂಜನ್ಸ್ ಆಕ್ಟ್ ಮಾಡಬೇಡಿ ಎಂದು ಪುನಃ ತಮ್ಮ ಮುಖಾಂತರ ಅವರಿಗೆ ಕೇಳಿಕೊಳ್ಳುತ್ತೇನೆ. ಆದರೆ, ಅಲ್ಲೊಂದು ಇದ್ದರು, ಇಲ್ಲೊಂದು ಇದ್ದರು ಎಂದು ಹೇಳುವುದಕ್ಕೆ ಹೋಗಬೇಡಿ. ನಮ್ಮ ಇರಿಗೇಷನ್ ಗೇಟ್ಸ್ ಏನು ಕೂಡಿಸುತ್ತಾರೆ, ಅವೂ ಕೂಡ ಪಂಜಾಬ್‌ನಿಂದಲೇ ಬರುತ್ತವೆ. ಇಂಟರ್‌ಸ್ಟೇಟ್ ಇಷ್ಟು ಲಿಂಕ್ಡ್ ಇದೆ, ಅದೆಲ್ಲಾ ಕೂಡ ಒಂದಕ್ಕೊಂದು ಲಿಂಕೇ ಇದೆ. ಅದಕ್ಕಾಗಿ ಇದರೊಳಗೂ ಇದೆ. ಅದರೊಳಗೂ ಇದೆ. ಎಲ್ಲದರ ಮೇಲೂ ತೆಗೆದುಕೊಳ್ಳಬೇಕಾಗುತ್ತದೆ. ದಯವಿಟ್ಟು, ಈ ರೀತಿಯಾಗಿ ಸಮರ್ಥನೆ ಮಾಡಿಕೊಳ್ಳತಕ್ಕಂಥಾದ್ದು ಸರಿಯಲ್ಲ. ಈ ರೀತಿಯಾಗಿ ಅವರು ಸಮರ್ಥನೆ ಮಾಡಿಕೊಳ್ಳುತ್ತಾ ಹೋದರೆ, ನಾವು ಖಂಡಿಸಬೇಕಾಗುತ್ತದೆ, ನಾನು ಖಂಡಿಸುತ್ತೇನೆ. ಮತ್ತು ಪ್ರಧಾನಮಂತ್ರಿಗಳಿಗೆ ನಾನು ಯಾವ ರೀತಿಯಿಂದಲೂ ರೆಫರೆನ್ಸ್ ಮಾಡಿಯೇ ಇಲ್ಲ. ನಾನು ಸುಮ್ಮನೆ ಹೇಳಿದೆ. ಏಕೆಂದರೆ, ಹಾಸನದಿಂದ ಅವರೂ ಬಂದಿದ್ದಾರೆ. ಇವರೂ ಹಾಸನದವರೇ. ನಿಮಗೆ ಬಹಳಬೇಕಲ್ಲಾ. ಆ ಒಂದು ದೃಷ್ಟಿಯಿಂದ ಮಾಡಿರಬಹುದು ಎಂದು ಹೇಳಿದೆ.

ಶ್ರೀ ಹೆಚ್.ಎನ್. ನಂಜೇಗೌಡ : ಅಧ್ಯಕ್ಷರೇ, ನಾನು ಒಂದೇ ಮಾತು ಹೇಳಿಬಿಡುತ್ತೇನೆ. It is the prerogative of the Government to have any enquiry it wants. That is a

different thing. ಆದರೆ ಈ ಸಭೆಯಲ್ಲಿ ತಂದು, ಅವರು ಹಾಗೆಯೇ ಸಿ.ಬಿ.ಐ.ಗೆ ರೆಫರ್ ಮಾಡಿದ್ದರೆ, ಶಿವಕುಮಾರ್‌ರವರು, ಮುಖ್ಯಮಂತ್ರಿಗಳ ಚೇಂಬರಿಗೆ ಹೋಗಿ ಕೇಳಿಕೊಂಡು, ರೆಫರ್ ಮಾಡಿದ್ದರೆ, ಹಾಗೆ ರೆಫರ್ ಮಾಡುವುದಕ್ಕೆ ಆಗಲೂ ಅವರಿಗೆ ಅಧಿಕಾರ ಇತ್ತು. ಇಷ್ಟೊಂದು ಕೇಸಿಗೇ ಈ ಸಭೆಯನ್ನು ಏಕ ಉಪಯೋಗಿಸಿಕೊಳ್ಳಬೇಕಾಗಿತ್ತು? We do not want to be a party to such decisions. ಈ ಸಭೆ ಯಾವಾಗಲೂ ಪಕ್ಷಾತೀತವಾಗಿರಬೇಕಾಗುತ್ತದೆ. ಈ ಸಭೆಗೆ ತೆಗೆದುಕೊಂಡರೆ, ಈ ಸಭೆಗೇ ಒಂದು ನಿಯಮ ಇರುತ್ತದೆ. ಸಭೆಯಲ್ಲಿ ಬರತಕ್ಕಂಥ ರಿಪೋರ್ಟ್ ಬಗ್ಗೆ ಸಭೆಯಲ್ಲಿ ಕೇಳಿ ಸರ್ಕಾರ ಸಭೆಯಲ್ಲಿಯೇ ಉತ್ತರ ಕೊಟ್ಟು ಕ್ರಮ ಕೈಗೊಳ್ಳಬಹುದಾದರೆ, ಪ್ರತಿಯೊಂದಕ್ಕೂ ನಾವು ಅದನ್ನೇ ಫಾಲೋ ಮಾಡಬೇಕಾಗುತ್ತದೆ. ಅಡ್ಮಿನಿಸ್ಟ್ರೇಟಿವ್ ವಿಷಯವನ್ನು ಅವರ ಚೇಂಬರಿನಲ್ಲಿಯೇ ತೆಗೆದುಕೊಂಡು ರೆಫರ್ ಮಾಡಿಬಿಟ್ಟಿದ್ದರೆ, ಈ ಸಭೆ ಪಾಲುದಾರರಾಗಬೇಕಾದ್ದು ಇರಲಿಲ್ಲ. That is all my point.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮಗೆ ಸಂಪೂರ್ಣ ಅಧಿಕಾರ ಇದೆ. ಆದರೆ, ನನ್ನ ವಾದ ಏನೆಂದರೆ, ನೀವು ಸಿ.ಬಿ.ಐ.ಗೆ ಈ ಹೌಸನ್ನು ಬಳಸಿ, ಇಲ್ಲಿ ಸದನದಲ್ಲಿ ಹೇಳಿದ್ದಾರೆ, ಅದಕ್ಕೆ ನಾವು ಮಾಡುತ್ತೇವೆಂದರು. ನೀವು ಅಡ್ಮಿನಿಸ್ಟ್ರೇಟಿವ್ ಮ್ಯಾಟರ್ ಆಗಿ ತೆಗೆದುಕೊಂಡಿದ್ದರೆ, ಅದು ನಿಮಗೆ ಬಿಟ್ಟ ವಿಚಾರ. ಆದರೆ, ನೀವು ನಮಗೆಲ್ಲರಿಗೂ ಪಾರ್ಟಿ ಮಾಡಬೇಡಿ. ಅದರ ಬಗ್ಗೆ ತಾವು ಪುನರ್ ಪರಿಶೀಲನೆ ಮಾಡಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಲಿ. ಚರ್ಚೆಯಾದರೆ, ಆಗ ಸತ್ಯಾಂಶ ಏನೆಂದು ಹೊರಕ್ಕೆ ಬರುತ್ತದೆ. ನ್ಯಾಯಾಂಗ ಸಚಿವರು ಏನು ಹೇಳಿದರು. ಇದರಲ್ಲಿ ಬೇರೆ ಬೇರೆ ರಾಜ್ಯದಲ್ಲಿ ವ್ಯಾಪಾರ ಮಾಡಿರತಕ್ಕಂಥಾದ್ದು, ಪರ್ಚೇಸ್ ಮಾಡಿರತಕ್ಕ ವ್ಯವಸ್ಥೆ ಇದೆ, ಅದಕ್ಕೆ ಸಿ.ಬಿ.ಐ. ಎಂದು. ಗ್ರಾನೈಟ್ ಬಗ್ಗೆಯೂ ಮಂಗಳೂರೂ ಬಂದರು ಇದೆ, ಮದ್ರಾಸ್ ಬಂದರು ಇದೆ. ಅನೇಕ ಬಂದರುಗಳು ಇವೆ. ನಾವು ಹೈದರಾಬಾದ್ ಬಂದರಿಗೆಲ್ಲಾ ಹೋಗಿ ಬಂದಿದ್ದೇವೆ. ನೇರವಾಗಿ ಹಿಡಿಯಿರಿ. ಗ್ರಾನೈಟುಗಳು ಹೊರದೇಶಕ್ಕೆ ಹೋಗಿಲ್ಲವೇ, ಹೊರದೇಶಕ್ಕೆ ಹೋಗಿದೆ. ಅದಕ್ಕಿಂತ ಹೆಚ್ಚಿಗೆ, ಇದು ಸಿ.ಬಿ.ಐ.ಗೆ ಹೋಗಬೇಕಾಗಿರುವುದು.

ಅಧ್ಯಕ್ಷರು : ಹೈದರಾಬಾದ್‌ನಲ್ಲಿ ಒಂದು ಇಲ್ಲ..

ಶ್ರೀ ವಾಟಾಳ್ ನಾಗರಾಜ್ : ಹೈದರಾಬಾದನಲ್ಲಿ ಕಾರ್ಖಾನೆ ಮತ್ತು ವಿಶಾಖಪಟ್ಟಣದಲ್ಲಿ ಬಂದರು ಇದೆ. ನಾವೇನು ಹೇಳುತ್ತೇವೆಂದರೆ, ಪ್ರಾಮಾಣಿಕತೆ ತಮ್ಮ ಸರ್ಕಾರಕ್ಕೆ ಇರುವುದಾದರೆ,... ಎಲ್ಲಾ ವರದಿಗಳನ್ನು ಮಂಡಿಸಿ ಇದರ ಮುಂದೆ. ಸಿ.ಬಿ.ಐ. ಕಳುಹಿಸುವಂತಹ ಗುರುತರವಾದ ವಿಶೇಷವಾಗಿ ಇದನ್ನು ಸಿ.ಬಿ.ಐ.ಗೆ ಕಳುಹಿಸಬೇಕು ಎಂದು ತಮ್ಮ ಸರ್ಕಾರ ತೀರ್ಮಾನ ಮಾಡುವುದಾದರೆ ಸಮಗ್ರವಾಗಿ ಚರ್ಚೆ ಆಗಲಿ ಸಭೆ ನಡೆಯುವಾಗ ಗೌಪ್ಯವಾಗಿ ಯಾವುದೋ ಮೂಲಕ ಎಲ್ಲೋ ತಂದು ಎಲ್ಲಿಗೋ ತೆಗೆದುಕೊಂಡು ಹೋಗತಕ್ಕಂಥಾ ವಿಚಾರ ಬೇಡ. ಇದು ಚರ್ಚೆ ಆಗಲಿ ಮಾನ್ಯ ನಾಣಯ್ಯನವರು ಸತ್ಯ ಪ್ರತಿಪಾದಕರು ತಾವು. ತಾವು ದೊಡ್ಡ ಹೋರಾಟ ಮಾಡುವವರು ದಯಮಾಡಿ ತೆಗೆದುಕೊಂಡು ಬನ್ನಿ ನೋಡೋಣ.

ಶ್ರೀ ಎಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ, ಈಗ ಒಂದು ಏನೆಂದರೆ A wrong signal need not go. ನಾವು ಏನೋ ಔಷಧಿ ಮಾರಾಟದಲ್ಲಿ ದುಡ್ಡು ಹೊಡೆದವರ ಪರ ಇದ್ದೇವೆಂದು ತಿಳಿದುಕೊಳ್ಳಬೇಡ. We are not in favour of them. ಈಗ ಉಪ್ಪು ತಿಂದವರು ನೀರು ಕುಡಿಯಲೇಬೇಕು ಮಾನ್ಯ ವಿರೋಧಪಕ್ಷದ ನಾಯಕರು ಆಗಲೇ ಹೇಳಿದರು. ಶಿಕ್ಷೆ ಆಗಲಿ. ನೀವು ಏನಾದರೂ ವಿಚಾರಣೆಯನ್ನು ಮಾಡಿಕೊಳ್ಳಿ. ಎಲ್ಲಿಗಾದರೂ ಕಳುಹಿಸಿ ಯಾವ ಎಜೆನ್ಸಿಗಾದರೂ ಕಳುಹಿಸಿ ಈ ಸಭೆಯ ಮುಖಾಂತರ ಏಕೆ ಭೇಕಾಗಿತ್ತು? ಅಷ್ಟೇ ನಮ್ಮದು. ಇದು ಆಡಳಿತಾತ್ಮಕ ವಿಷಯ. ಇದನ್ನು ನೀವು ಮಾಡಬೇಡಿ ಎಂದು ಯಾರು ಹೇಳಿದ್ದರು? We took objection for the procedure adopted. We are not in favour of those who have swindled the Government money. who have looted Government Treasury. Let the signal go correctly.

ಅಧ್ಯಕ್ಷರು : ಮಾನ್ಯ ನಂಜೇಗೌಡರೇ, ಒಂದು ಸಲ ಲೋಕಸಭೆಯಲ್ಲಿ ಒಬ್ಬರು ಸದಸ್ಯರು ತಮ್ಮ ಬೆನ್ನು ತೋರಿಸಿ ಹೋಗಬೇಕಾದರೆ ಅಧ್ಯಕ್ಷರು ಬೆನ್ನು ತೋರಿಸುವ ಹಾಗೆ ಇಲ್ಲ ಎಂದು ಹೇಳಿದರು. ಆ ಸದಸ್ಯರು ಯಾರು ಅಂದರೆ ಮಾನ್ಯ ಫಿಲೂ ಮೋದಿಯವರು. ಆಮೇಲೆ ಮಾನ್ಯ ಫಿಲೂ ಮೋದಿಯವರು. ತಮ್ಮ ಸ್ಥಾನಕ್ಕೆ ಹೋಗಿ ಹೇಳಿದರಂತೆ. I have neither back nor front, I have round ಎಂದು So, Mr. Nanjegowda according to me, all the matters have no interested. He is round. I know your position and delicacy in all these matters. ಅವರಿಗೆ ಅವರದ್ದೂ ಆಸಕ್ತಿ ಇಲ್ಲ ಇವರದ್ದೂ ಆಸಕ್ತಿ ಇಲ್ಲ procedural impropriety ಏನು ಇದೆ ಅದನ್ನು ಅವರು ಹೇಳಿದರು.

ಶ್ರೀ ವಾಟಾಳ್ ನಾಗರಾಜ್ : ನಮಗೂ ಖಿರ್ಗಿಯವರಿಗೂ ಏನೋ ಆಸಕ್ತಿ ಇಲ್ಲವೇ ಇಲ್ಲ. ಇವರಿಗಾದರೂ ಸ್ವಲ್ಪ ಇದ್ದರೂ ಇರಬಹುದು ಕಾರಣ ಏನೆಂದರೆ ಹಾಸನದವರು ಎಂದು ಅವರೆಲ್ಲರೂ ಒಟ್ಟೊಟ್ಟಿಗೆ ಇದ್ದಾರ ಎಂದು. ನಮಗೆ ಏನೂ ಇಲ್ಲವೇ ಇಲ್ಲ. ಮಾನ್ಯ ನಾಣಯ್ಯನರರಿಗೂ ಇಲ್ಲ. ನಮಗೆ ಯಾರಿಗೂ ಇಲ್ಲ ಮೂರನೇಯವರ ಬಗ್ಗೆ ನಾವು ಜಗಳ ಆಡುತ್ತಿದ್ದೇವೆ.

ಅಧ್ಯಕ್ಷರು : ಆ ಆಪಾದನೆ ಅವರ ಮೇಲೆ ಸರಿಯಲ್ಲ. ಅವರು ಸಂಬಂಧ ಎಲ್ಲಾ ಬಿಡಿಸಿ ಹೇಳಿ ತಮಾಷೆ ನೋಡುತ್ತಿದ್ದಾರೆ. ಅದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನು ಆಪಾದನೆ ಮಾಡುತ್ತಿಲ್ಲ.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಈ ಅಂದಾಜು ಸಮಿತಿ ವರದಿ ಕೊಟ್ಟು 3-4 ವರ್ಷ ಆಯಿತು. ಈ ಸರ್ಕಾರ ಕೂಡ ಅಧಿಕಾರಕ್ಕೆ ಬಂದು ಎರಡೂ ಕಾಲು ವರ್ಷ ಆಯಿತು. ಮಾನ್ಯ ಶಿವಕುಮಾರ್ ಅವರು ಆ ಸಮಿತಿಯ ಅಧ್ಯಕ್ಷರಾಗಿ ಒಂದು ವರ್ಷ ಆಯಿತು. ಇವತ್ತಿನವರೆಗೂ ಆ ವಿಷಯ ಏಕೆ ತಮ್ಮ ಗಮನಕ್ಕೆ ಬಂದಿರಲಿಲ್ಲ? ಈಗ ಏಕೆ ಬಂತು? ಸಮಿತಿಗಳ ವರದಿಯನ್ನು....

ಅಧ್ಯಕ್ಷರು : ಮಾನ್ಯ ಶಿವಕುಮಾರ್ ಅವರ ಮಾತುಗಳನ್ನು ನಾನು ನಿನ್ನೆ ಕೇಳಿಸಿಕೊಂಡ ರೀತಿಯಲ್ಲಿ....

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಸಮಿತಿಗಳ ವರದಿಗಳನ್ನು ವಿಧಾನ ಮಂಡಲದ ಇತಿಹಾಸದಲ್ಲಿ ಯಾವಾಗಲೂದರೂ ಸಿಬಿಐಗೆ ಒಪ್ಪಿಸಿರುವುದು ಇದೆಯೇ ಅದರಲ್ಲೂ ಕೂಡ ಅವರು ಏನು ಶಿಫಾರಸ್ಸು ಮಾಡಿದ್ದಾರೆ?

ಅಧ್ಯಕ್ಷರು : ಮಾನ್ಯ ರಾಮಸ್ವಾಮಿಯವರೇ, ಈ ವಿಷಯದಲ್ಲಿ ಅವರೇ ರೆಕಮೆಂಡ್ ಮಾಡಿದ್ದಾರೆ. ಮಾನ್ಯ ರಾಮಸ್ವಾಮಿಯವರೇ, ನಿನ್ನೆ ಮಾನ್ಯ ಶಿವಕುಮಾರ್ ಅವರು ಹೇಳಿದ್ದನ್ನು ನಾನು ಕೇರಫುಲ್ ಆಗಿ ಕೇಳಿಸಿಕೊಂಡೆ ಅವರು ಹೇಳಿದ್ದು ಏನೆಂದರೆ ನಾವು ಇಷ್ಟು ಹಣ ಖರ್ಚು ಮಾಡುತ್ತೇವೆ ಇಷ್ಟು ಸಿಟ್ಟಿಂಗ್ಸ್ ಮಾಡುತ್ತೇವೆ. ಇವು ಸ್ಯಾಚುಟರಿ ಕಮಿಟೀಸ್. ನಮ್ಮ ರೆಕಮೆಂಟೆಡೇಷನ್ಸ್‌ಗೆ ಏನು ಬೆಲೆ ಇದೆ. ನಾವು ಏತಕ್ಕೆ ಮಾಡಬೇಕು. ನಾನು ಈಗ ಎಸ್ಟಿಮೇಟ್ಸ್ ಕಮಿಟಿ ಅಧ್ಯಕ್ಷ. ಹಿಂದ ಇದ್ದ ಎಸ್ಟಿಮೇಟ್ಸ್ ಕಮಿಟಿಯವರೇ ರೆಕಮೆಂಡ್ ಮಾಡಿದ್ದಾರೆ ಸಿ ಬಿ.ಐ ಎನ್‌ಕ್ವೈರಿ ಆಗಬೇಕು ಎಂದು ಹೇಳಿ ಮತ್ತೆ ಇದರಲ್ಲಿ ಏನೂ ರಾಜಕೀಯ ಇಲ್ಲ. The Minister also belongs to the same Party and the Chairman of the Estimates Committee was also from the same party ಎಂದು ಅವರೇ ಹೇಳಿದರು. I am reproducing what he said.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೇ, ನಾನು ನಿನ್ನೆ ಆ ರಿಪೋರ್ಟ್‌ನ್ನು ನೋಡಿದೆ. ಎಲ್ಲೂ ಕೂಡ ಸಿ ಬಿ ಐಗೆ ರೆಫರ್ ಮಾಡಬೇಕೆಂದು ಹೇಳಿರುವುದು ನನ್ನ ಗಮನಕ್ಕೆ ಬರಲಿಲ್ಲ.

MR. SPEAKER : I have not gone through the report. That's what atleast he expressed here.... ನೋಡೋಣ ಪ್ರಮೀಳಾರವರು, ಪುಟ್ಟಸ್ವಾಮಿ ಗೌಡರ ವಕೀಲರು, ಅವರೇ ಹೇಳಲಿ ನೋಡೋಣ ಏನು ಹೇಳುತ್ತಾರೆ ಎಂದು.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಈಗ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖಾ ಸಮಿತಿಯವರೂ ಕೂಡ ಸುಮಾರು 25 ಕೋಟಿ ರೂಪಾಯಿಗಳು ಆಹಾರ ಖರೀದಿ ವ್ಯವಹಾರದಲ್ಲಿ ದುರುಪಯೋಗ ಆಗಿದೆ ಎಂದು ನೇರವಾಗಿ ಆಪಾದನೆ ಮಾಡಿದ್ದಾರೆ. ಸರ್ಕಾರಕ್ಕೆ ಅವರು ವರದಿಯನ್ನು ಸಲ್ಲಿಸಿದ್ದಾರೆ. ಒಂದು ತಿಂಗಳಲ್ಲಿ ಅದರ ಬಗ್ಗೆ ವಿಚಾರಣೆ ಮಾಡಿ ತನಿಖೆ ಮಾಡಿ ನಮಗೆ ತಿಳಿಸಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ಏಕೆ ಕಾಳಜಿ ಇಲ್ಲ? ಇದಕ್ಕೆ ಏಕೆ ಕಾಳಜಿ ಬಂತು? ಅದಕ್ಕೆ ನಾವು ಸಸ್ಪಕ್ಟ್ ಮಾಡುತ್ತಾ ಇರತಕ್ಕಾಂಥದ್ದು ಅದು ಇದರ ಹಿನ್ನೆಲೆ ಎಂದು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೇ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಸಮಿತಿಯಲ್ಲಿ Concern for working children ಬಗ್ಗೆ ಸಿ ಬಿ ಐ ವಿಚಾರಣೆ ಆಗಲೇಬೇಕು ಎಂದು ನಾನು ರೆಕಮೆಂಡ್ ಮಾಡಿದ್ದೇನೆ ನಮ್ಮ ಸಮಿತಿಯವರು ಮಾಡಿದ್ದೇವೆ. ದೇಶವಿದೇಶಗಳಿಂದ ಕೋಟ್ಯಾಂತರ ರೂಪಾಯಿಗಳ ಹಣ ಬಂದು ಈ ದೇಶದಲ್ಲಿ ಮಕ್ಕಳ ಹೆಸರಿನಲ್ಲಿ ಲೋಪದೋಷ ಆಗಿದೆ ಎಂದು ಹೇಳಿ ಇದು ಸಿ ಬಿ ಐ ವಿಚಾರಣೆ ಆಗಬೇಕು ಎಂದು ಹೇಳಿ ನಾನು ವರದಿ ಕೊಟ್ಟು ಒಂದು ವರ್ಷ ಆಯಿತು. ಅದರ ಬಗ್ಗೆ ಸರ್ಕಾರ ಒಂದು ಚಕಾರ ಕೂಡ ಎತ್ತಿಲ್ಲ ಏನೂ ಕ್ರಮ ತೆಗೆದುಕೊಂಡಿಲ್ಲ.

ನಾವು ಕಮಿಟಿಯವರು ರಫರ್ ಮಾಡಿದಾಗ ವಿದೇಶಗಳಿಂದ ಹಣ ಬಂದಾಗ ಅದು ದುರುಪಯೋಗವಾದಾಗ ಆಗದೇ ಇದ್ದಂತಹ ಕಾಳಜಿ ಇದರಲ್ಲ ಏಕೆ ಬಂತು ಎನ್ನುವುದು ನಮ್ಮ ಪ್ರಶ್ನೆ. ಈಗಾಗಲೇ ಮಾನ್ಯ ನಾಗರಾಜ ಅವರು ಮಾನ್ಯ ಸಂಜೇಗೌಡರು ಹೇಳಿದ ಹಾಗೆ ಎಲ್ಲಾ ಕಮಿಟಿಗಳ ವರದಿಗಳನ್ನು ರಫರ್ ಮಾಡಿ. ಏನೇನು ಆಗಿದೆ ಎಂಬುದನ್ನು ನೋಡೋಣ. ನಾನು ಸುಮಾರು 9 ವರದಿಗಳನ್ನು ಕೊಟ್ಟಿದ್ದೇನೆ. ಯಾವೂದೂ ಏನೂ ಆಗಿಲ್ಲ. ನನಗೆ ಅನಿಸುತ್ತದೆ ಇದು ರಾಜಕೀಯ ಉದ್ದೇಶದಿಂದಲೇ ಆಗಿರತಕ್ಕಂಥಾದ್ದು ಎಂದು ಅನ್ನಿಸುತ್ತದೆ. ಏಕೆಂದರೆ ಯಾರೋ ಒಬ್ಬರು ಹೇಳುವುದು ಅದನ್ನು ತಕ್ಷಣ ಒಪ್ಪಿಕೊಳ್ಳುವಂಥಾದ್ದು ಆದಾಗ ಇದರಲ್ಲಿ ಏನೋ ಇದೆ ಎನ್ನುವಂಥಾದ್ದು ನೋಡಿದವರಿಗೆ ಕಾಣುತ್ತದೆ. ಆದ್ದರಿಂದ ಇದರ ಬಗ್ಗೆ ಪುನರ ವಿಮರ್ಶೆ ಆಗಬೇಕು. ಇದರ ಬಗ್ಗೆ ಚರ್ಚೆ ಆದ ನಂತರ ಏನಾಗುತ್ತದೆ ನೋಡೋಣ. ತಕ್ಷಣ ಸಿ.ಬಿ.ಐಗೆ ರೆಫರ್ ಮಾಡುವುದು ಒಳ್ಳೆಯದಲ್ಲ ಎಂದು ನಾನು ಹೇಳುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೇ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖಾ ಸಮಿತಿಯವರು ವರದಿ ಕೊಟ್ಟ ಮೇಲೆ ಅದನ್ನು ಸಿ ಬಿ.ಐಗೆ ಒಪ್ಪಿಸಬೇಕು ಎಂದು ಹೇಳಿದರು. ಆದರೆ ಮಾನ್ಯ ಮಂತ್ರಿಗಳು ಹೇಳಿಕೆ ಕೊಟ್ಟರು ಒಬ್ಬರು ಸಾಮಾನ್ಯ ಅಧಿಕಾರಿಯನ್ನು ತನಿಖೆ ಮಾಡಲು ನೇಮಕ ಮಾಡಿದ್ದಾರೆ. ವಿಷಯ ಸಮಿತಿಯವರು ತಮ್ಮ ವರದಿ ಕೊಟ್ಟ ಮೇಲೆ ಮತ್ತೆ ತನಿಖೆಗೆ ಒಬ್ಬ ಅಧಿಕಾರಿಯನ್ನು ನೇಮಿಸಿದ್ದಾರೆ. ಆ ಅಧಿಕಾರಿ ವಿಷಯ ಸಮಿತಿಗಿಂತ ಹೆಚ್ಚೋ ಏನೋ ಎಂಬುದು ನನಗೆ ಗೊತ್ತಿಲ್ಲ. ತಾವು ಈ ಬಗ್ಗೆ ಮಾರ್ಗ ದರ್ಶನ ಮಾಡಬೇಕು. ನಿಯಮಾವಳಿ ಹೇಗೆ ಇದೆ ಎಂಬುದನ್ನು ಹೇಳಿ. ಈ ರೀತಿ ನಡೆಯುತ್ತಾ ಹೋದರೆ ಯಾರನ್ನೂ ಎಲ್ಲಿ ಹಿಡಿಯುವುದು ಎನು ಮಾಡುವುದು? ಯಾವುದೋ ಒಂದು ಉದ್ದೇಶಕ್ಕೋಸ್ಕರ ಇನ್ನಾರನ್ನು ಸಿಕ್ಕಿಹಾಕಿಸುವುದು ಆದರೆ ಇಲ್ಲಿ ಯಾರೋ ನುಣಚಿಕೊಂಡು ಹೋಗುತ್ತಾರೆ ಇಂತಹ ಪ್ರಕರಣಗಳಲ್ಲಿ.

ಶ್ರೀ ಕೆ. ಶಿವರಾಮ್ : ಮಾನ್ಯ ಅಧ್ಯಕ್ಷರೇ, ಆ ವರದಿಯಲ್ಲಿ ಸಿ ಬಿ ಐ ನಿಂದ ತನಿಖೆ ಆಗಬೇಕು ಎಂದು ಏನಾದರೂ ಇದೆಯೇ? Will not the House mislead by this? In fact, I have a copy.

ಅಧ್ಯಕ್ಷರು : ನನಗೆ ಗೊತ್ತಿಲ್ಲ. Please listen to me.

ಶ್ರೀ ಕೆ. ಶಿವರಾಮ್ : ಈಗ ಅವರು ಮೆನ್‌ಷನ್ ಮಾಡಿದರು ಎಂದು ಹೇಳಿದಿರಿ. ಈಗ ಹೌಸ್ ಮಿಸ್‌ಲೀಡ್ ಆಗಿರತಕ್ಕಂಥಾದ್ದು.....

MR. SPEAKER : This is where the delicacy arises for the chair and where all the members should be vigilant and alert. I have only tried to reproduce the words of Mr. Shivakumar what he was said. It is not what I said. I have not gone through the report.

ಶ್ರೀ ಕೆ. ಶಿವರಾಮ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಕಾನೂನು ಸಚಿವರು ಒಂದು ಸಂದರ್ಭದಲ್ಲಿ

ಹೇಳಿದರು ಸಿ ಬಿ ಐ ಗೆ ರೆಫರ ಮಾಡಬೇಕು ಎನ್ನತಕ್ಕಂಥಾದ್ದು ಇದೆ ಎಂದು ಆದರೆ ಆ ವರದಿಯಲ್ಲಿ ಆ ರೀತಿ ಇಲ್ಲ ಎನ್ನತಕ್ಕಂಥಾದ್ದು ಇದೆ ಎಂದು ಆದರೆ ಆ ವರದಿಯಲ್ಲಿ ಆ ರೀತಿ ಇಲ್ಲ ಎನ್ನತಕ್ಕಂಥಾದ್ದನ್ನು ನಾನು ಹೇಳುತ್ತೇನೆ.

ಶ್ರೀ ಬಿ. ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಅನೇಕ ಸಾರಿ ಚರ್ಚೆ ಆಗಿ ಸಿ ಬಿ ಐ.ಗೆ ಕಳುಹಿಸಬೇಕು ಎಂದು ತುಂಬಾ ವಿಚಾರಗಳು ಚರ್ಚೆ ಆಗಿ ತುಂಬಾ ವಿಚಾರಗಳು ಸಿ ಬಿ ಐ ಗೆ ಕಳುಹಿಸಬೇಕಾಗಿತ್ತು. ಹೋಗಲಿಲ್ಲ. ಆದರೆ ಇದು ಹೋಗಿದೆ. ಏಕೆ ಹೋಯಿತು ಎನ್ನುವುದಾದರೆ ಒಂದೇ ಕಾರಣ. ನಾನು ಯಾರ ಹೆಸರನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಈ ಕೇಸ್ ಸಂಬಂಧಪಟ್ಟಿರತಕ್ಕಂಥಾದ್ದು ಹೊಳೀನರಸೀಪುರಕ್ಕೆ ಸಂಬಂಧಪಟ್ಟಿರತಕ್ಕಂಥಾದ್ದು. ಹೊಳೀನರಸೀಪುರದಲ್ಲಿ ಚುನಾವಣೆಗೆ ನಿಲ್ಲಬೇಕಾದರೆ ಎರಡೇ ಸಂಸಾರಗಳು ನಿಲ್ಲಬೇಕು. ಅದರಲ್ಲಿ ಒಂದು ಫ್ಯಾಮಿಲಿಯನ್ನು ತೆಗೆದುಬಿಟ್ಟರೆ ಮತ್ತೆ ಮುಂದೆ ಚುನಾವಣೆಗೆ ನಿಲ್ಲುವುದಕ್ಕೆ ಜನರೇ ಬರುವುದಿಲ್ಲ. ಅಂದಮೇಲೆ ಇದರ ಹಿನ್ನೆಲೆ ಇದೇ ಇರುವುದು. ಬೇರೆ ಹಿನ್ನೆಲೇ ಇಲ್ಲ. ಹಾಕುವುದಾದರೆ ಎಲ್ಲವೂ ಸಿ ಬಿ ಐ ಗೆ ಹಾಕಿ. ಈಗ ಗ್ರಾನೈಟ್ ಕಮಿಟಿಯಲ್ಲಿ ಮಾಡಿದ್ದೇವೆ ಹಾಕಿ. ಅದರಲ್ಲಿ ಒಬ್ಬರೇ ಸಿಗುವುದಿಲ್ಲ ಹಲವಾರು ಜನರು ಬರುತ್ತಾರೆ. ಮಾನ್ಯ ಅಧ್ಯಕ್ಷರು ನಮ್ಮ ಸಮಿತಿಗೆ ಒಂದು ವಿಚಾರವನ್ನು ವಹಿಸಿದ್ದಾರೆ. ಬಾಗೂರು ನವಿಲೆ ಸುರಂಗ ಮಾರ್ಗದಲ್ಲಿ ಆಗಿರುವಂತಹ ಅವ್ಯವಹಾರದ ಬಗ್ಗೆ. ಅಲ್ಲಿ ಅವ್ಯವಹಾರ ನಡೆದಿದೆ ಎನ್ನುವ ವರದಿ ಬಂತು. ಅದರ ಮೇಲೆ ತಾವು ಕ್ರಮ ತೆಗೆದುಕೊಳ್ಳಲಿಲ್ಲ. ಮತ್ತೆ ಹಣ ಕೊಡಲು ಹೋಗುತ್ತಿದ್ದೀರಿ ಇದೆಲ್ಲಾ ನಡೆಯುತ್ತಿದೆ. ಪರ್ಟಿಕ್ಯುಲರ್ ಕೇಸ್ ಹಾಕಿರುವುದರಿಂದ ನೀವು ನಿಜವಾಗಿಯೂ ಒಳ್ಳೆಯದು ಆಗಬೇಕೆಂದು ಹಾಕಿದ್ದರೂ ಕೂಡ ಇದರ ಹಿನ್ನೆಲೆ ಬೇರೆ ಅರ್ಥಗಳು ಬರುವುದರಿಂದ ಅದರ ಬಗ್ಗೆ ನಾವು ಚಿಂತೆ ಮಾಡಬೇಕಾಗುತ್ತದೆ. ಇದರಲ್ಲಿ ಬೇರೆ ಏನೂ ಅನುಮಾನವೇ ಇಲ್ಲ. ಹಾಸನ ಜೆಲ್ಲೆಯವರು ನಾವು ಹೇಳುತ್ತಿದ್ದೇವೆ ಅನುಮಾನವೇ ಇಲ್ಲ. ಮಾನ್ಯ ನಾಣಯ್ಯನವರಿಗೆ ಸಂಪೂರ್ಣವಾಗಿ ಗೊತ್ತಿರತಕ್ಕಂಥ ವಿಚಾರ. ಕಣ್ಣು ಹುಬ್ಬು ಮೇಲಿಟ್ಟರೂ ಒಂದೇ ಕೆಳಗೆ ಇಟ್ಟರೂ ಒಂದೇ ವಿಚಾರ ತಿಳಿದಿದ್ದರೂ ಕೂಡ ಬೇರೆ ಮಾತನಾಡುತ್ತಿದ್ದೀರಿ.

MR. SPEAKER : We are not taking up that report for discussion now. ಟೈಮ ಹೋಗಿಬಿಡುತ್ತದೆ ಅದಕ್ಕೋಸ್ಕರ ಅಷ್ಟೇ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ರೆಕಾರ್ಡನ್ನು ಸರಿಪಡಿಸುವ ದೃಷ್ಟಿಯಿಂದ 1993-94ರ ವರದಿಯನ್ನು ಏನು ಪ್ರಸ್ತಾಪ ಮಾಡಿದರಲ್ಲಾ ಆ 8ನೇ ಪುಟದಲ್ಲಿ ಹೀಗೆ ಹೇಳುತ್ತಾರೆ. ಈ ಔಷಧಿಗಳನ್ನು ತಯಾರಿಸುವ ತೇಜ್‌ಪಾಲ್ ಎಂಬ ಸಂಸ್ಥೆಯವರು ಹಲವಾರು ಔಷಧಿಗಳನ್ನು ತಯಾರು ಮಾಡುವ ಘಟಕಗಳನ್ನು ಹೊಂದಿದ್ದು ವಿವಿಧ ಹೆಸರುಗಳಲ್ಲಿ ಸರ್ಕಾರಿ ಆಸ್ಪತ್ರೆಗಳಿಗೆ ಔಷಧಿಗಳನ್ನು ಸರಬರಾಜು ಮಾಡುತ್ತಿದ್ದಾರೆ. ಈ ವಿಷಯವನ್ನು ಆರೋಗ್ಯ ಇಲಾಖೆಯವರು ಅತ್ಯಂತ ಗಂಭೀರವಾಗಿ ಪರಿಗಣಿಸಿ ಮೆ: ತೇಜಪಾಲ್ ಸಂಸ್ಥೆಯವರಿಗೆ ನೀಡಿರುವ ಪರವಾನಿಗೆಯನ್ನು ಕೂಡಲೇ ರದ್ದುಪಡಿಸಿ ಇವರ ವಿರುದ್ಧ ಔಷಧಿ ನಿಯಂತ್ರಕರ ಕಾಯ್ದೆ ಅನ್ವಯ ಕ್ರಮ ಜರುಗಿಸಿ ಇವರಿಗೆ ಶಿಕ್ಷೆ ವಿಧಿಸಿ ಈ ಸಮಸ್ಯೆ ಬಗ್ಗೆ ಎಲ್ಲಾ ಪತ್ರಿಕೆಗಳಲ್ಲಿ ಪ್ರಚಾರ ನೀಡಿ ಸಾರ್ವಜನಿಕ ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ

ಕೆಲಸ ನಿರ್ವಹಿಸುತ್ತಿರುವ ವೈದ್ಯರಲ್ಲಿ ತಿಳುವಳಿಕೆಯನ್ನು ನೀಡಬೇಕೆಂದೂ ಸಹ ಸಮಿತಿಯು ಆಶಿಸುತ್ತದೆ. ಹಾಗೂ ಈ ಸಮಸ್ಯೆ ವಿರುದ್ಧ ಕ್ರಮ ಕೈಗೊಳ್ಳಬೇಕೆಂದೂ ಸಹ ಸಮಿತಿ ಶಿಫಾರಸ್ಸು ಮಾಡುತ್ತದೆ. ಎರಡನೇಯದು ಪುಟ 17ರಲ್ಲಿ ಅದಕಾರಣ ಇದಕ್ಕೆ ಕಾರಣಕರ್ತರಾಗಿರತಕ್ಕಂಥ ಕೇಂದ್ರೀಯ ಔಷಧಿ ಮಂಡಲಿಯ ಅಂದಿನ ನಿರ್ದೇಶಕರಾಗಿದ್ದಂತಹವರನ್ನು ಜವಾಬ್ದಾರಿರರನ್ನಾಗಿ ಮಾಡಿ ಅವರನ್ನು ಕೂಡಲೇ ಅಮಾನತ್ತಿನಲ್ಲಿಟ್ಟು ಈ ಬಗ್ಗೆ ಕೂಲಂಕಷವಾಗಿ ತನಿಖೆ ನಡೆಸಿ ತಪ್ಪಿತಸ್ಥರು ಎಂದು ಕಂಡು ಬಂದಲ್ಲಿ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಸಮಿತಿ ಶಿಫಾರಸ್ಸು ಮಾಡುತ್ತದೆ. ಇದೇ ಎರಡು ಶಿಫಾರಸ್ಸು ಮಾಡಿದ್ದಾರೆ. ಇದರಲ್ಲಿ ಸಿ ಬಿ ಐ ಗೆ ಕಳುಹಿಸಿಬೇಕೆಂದು ಎಲ್ಲಿ ಇದೆ? ಸಿ ಓ ಡಿಯೂ ಇಲ್ಲ. ಒಂದು, ಲೈಸನ್ಸನ್ನು ರದ್ದುಪಡಿಸಿ ಪ್ರಚಾರಪಡಿಸಬೇಕು ಎಂದು, ಇನ್ನೊಂದು ಯಾವ ಅಧಿಕಾರಿಗಳು ಇದರಲ್ಲಿ ಇದ್ದಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಇದೆ. ಇದೆಲ್ಲಾ ಅಡ್ಮಿನಿಸ್ಟ್ರೇಟೀವ್ ಮ್ಯಾಟರ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಡ್ಮಿನಿಸ್ಟ್ರೇಷನ್‌ನಲ್ಲಿ ನೇರವಾದ ಅಧಿಕಾರ ಇದೆಯಲ್ಲಾ? ಕ್ಯಾಬಿನೆಟ್ ಡಿಸೀಷನ್ ತೆಗೆದುಕೊಂಡು ರೆಫರ್ ಮಾಡಬಹುದು. ಈ ಸದನಕ್ಕೆ ಏಕೆ ಪಾರ್ಟಿ ಮಾಡುತ್ತೀರೆಂದು ನಾನು ಕೇಳುವುದಷ್ಟೆ. ನಿಮಗೆ ಹಕ್ಕು ಇದೆ, ನೀವು ಏನು ಬೇಕಾದರೂ ಮಾಡಬಹುದು. ಅನಾವಶ್ಯಕವಾಗಿ ಇಡೀ ಸದನದ ಒಂದು ಕನ್‌ಸೆಂಟ್ ತೆಗೆದುಕೊಂಡು, ಸದನದಲ್ಲಿ ಒಪ್ಪಿದ್ದಾರೆ, ಅದಕ್ಕೆ ನಾವು ಕಳುಹಿಸುತ್ತೇವೆ ಎನ್ನತಕ್ಕಂಥ ಅಭಿಪ್ರಾಯವನ್ನು ಕೊಡುತ್ತಿದ್ದೀರಿ. ಅದು ಆಗಬಾರದು.

ಶ್ರೀ ಸಿ. ಬೈರೇಗೌಡ : ಇಲ್ಲಿ ಪ್ರಸ್ತಾಪವಾಗಿರುವುದರಿಂದ, ಇದರ ಬಗ್ಗೆ ಸರ್ಕಾರದ ಉದ್ದೇಶ ಏನು ಎಂದು ಹೇಳಿರತಕ್ಕಂಥಾದ್ದು ಅಷ್ಟೇ, ಸದನವನ್ನು ಯಾವ ರೀತಿಯಲ್ಲೂ ದುರುಪಯೋಗಪಡಿಸಿಕೊಳ್ಳಬೇಕು ಎನ್ನತಕ್ಕಂಥ ಪ್ರಯತ್ನ ಸರ್ಕಾರದಿಂದ ಆಗಿಲ್ಲ. ಇಲ್ಲಿ ಅನೇಕ ಸದಸ್ಯರುಗಳು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಾರೆ, ಪ್ರಸ್ತಾಪ ಮಾಡಿದಂಥ ಸಮಯದಲ್ಲಿ ಅದರ ಬಗ್ಗೆ ಸರ್ಕಾರದ ತೀರ್ಮಾನ ಏನು ಮತ್ತು ಸರ್ಕಾರದ ಆಲೋಚನೆ ಏನು ಎಂದು ಹೇಳಲೇಬೇಕಾಗುತ್ತದೆ. ಈ ಬಗ್ಗೆ ಮಾನ್ಯ ಸದಸ್ಯರೊಬ್ಬರು ವಿಷಯವನ್ನು ಪ್ರಸ್ತಾಪ ಮಾಡಿರುವುದರಿಂದ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಅಷ್ಟೇ ಹೊರತು ಇಲ್ಲಿ ಯಾವ ದುರುಪಯೋಗ ಕೂಡ ಆಗಿಲ್ಲ.

ಶ್ರೀ ಬಿ. ಶಿವರಾಮ : ವರದಿಯಲ್ಲಿ ಏನಿದೆ ಎಂದು ನೋಡುವ ಮೊದಲೇ ಸಿ.ಬಿ.ಐ. ಗೆ ರೆಫರ್ ಮಾಡಲಾಗಿದೆಯಲ್ಲಾ ಎಂದು ಕೇಳಿದ್ದೇವೆಯೇ ಹೊರತು, ತಾವು ವರದಿ ನೋಡಿ ರೆಫರ್ ಮಾಡಿದ್ದಿದ್ದರೆ ತಪ್ಪೇನೂ ಇರಲಿಲ್ಲ.

ಶ್ರೀ ಸಿ ಬೈರೇಗೌಡ : ಸಿ.ಬಿ.ಐ. ಎನ್‌ಕ್ವೈರಿ ಅಂತ ತಕ್ಷಣ ಅವರನ್ನು ಗಲ್ಲಿಗೆ ಹಾಕುತ್ತಾರೆಂದು ಅಲ್ಲ, ವಿಚಾರಣೆ ಆಗುತ್ತದೆ, ತಪ್ಪಿತಸ್ಥರೆಂದು ಕಂಡು ಬಂದಲ್ಲಿ ಅದು ನ್ಯಾಯಾಲಯದ ಮುಂದೆ ಹೋಗುತ್ತದೆ, ನ್ಯಾಯಾಲಯದ ತೀರ್ಪಿಗೆ ಎಲ್ಲರೂ ಬದ್ಧರಾಗಿರಬೇಕಾಗುತ್ತದೆ.

ಅಧ್ಯಕ್ಷರು : ಒಂದೇ ಒಂದು ನಿಮಿಷ, ನಿನ್ನೆ ಶಿವಕುಮಾರ್‌ರವರು ಹೇಳಿದ್ದನ್ನು ನಾನು ನೆನಪು ಇಟ್ಟುಕೊಂಡು ಹಾಗೇ ಹೇಳಿದ್ದೇನೆ, ನಾನು ಅನಂತರ ರೆಕಾರ್ಡ್ಸ್ ತರಿಸಿ ನೋಡುತ್ತೇನೆ, ಶಿವಕುಮಾರ್‌ರವರು

ಏನು ಹೇಳಿದ್ದರು ಎಂದು ಹೇಳಿ, ನಾನು ಹೇಳಿದ ಮಾತನ್ನು ಶಿವಕುಮಾರ್ ಹೇಳಿದರೇ ಅಥವಾ ಇಲ್ಲವೇ? ಗಮನಿಸಿಕೊಳ್ಳುತ್ತೇನೆ, ಒಂದು ವೇಳೆ ಶಿವಕುಮಾರ್‌ರವರು ಹೇಳದೇ ಇದ್ದದ್ದನ್ನು, ಶಿವಕುಮಾರ್‌ರವರು ಹೀಗೆ ಹೇಳಿದರೆಂದು ನಾನು ಹೇಳಿದರೂ ಕೂಡ that also cannot remain in record. ಒಂದು ವೇಳೆ ಶಿವಕುಮಾರ್‌ರವರು ಹಾಗೆ ಹೇಳಿದ್ದರೆ, ಅದು ಎಲ್ಲಿದೆ? ಎಕೆ ಎಂದು that also I will get it verified. ಇಲ್ಲವಲ್ಲರೀ ರಕಮೆಂಡೇಷನ್ ಎಲ್ಲೂ ಇಲ್ಲ ಎಂದು you have said a wrong thing even that I will get it rectified. Please give me sometime.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಕಾನೂನು ಸಚಿವರು ಇಲ್ಲೇ ಇದ್ದಾರೆ. ನಾನು ಇದನ್ನು ಹೊಸದಾಗಿ ಹೇಳಿಕೊಡುವುದು ಬೇಕಾಗಿಲ್ಲ. ಮಾನ್ಯ ಬೈರೇಗೌಡರು ಹೊಳೇನರಸೀಪುರದ ಪಾಲಿಟಿಕ್ಸ್‌ಗೆ ಹೋಗುವುದು ಬೇಡ, ಅವರು ಕರ್ನಾಟಕ ರಾಜ್ಯದ ಹಿತದೃಷ್ಟಿಯಿಂದ ವಿಚಾರ ಮಾಡಲಿ. ಏಕೆಂದರೆ, ಮೊದಲನೇ ಶಿಫಾರಸ್ಸಿನಲ್ಲಿ ಲೈಸನ್ಸನ್ನು ರದ್ದುಪಡಿಸಬೇಕೆಂದು ಹೇಳಲಾಗಿದೆ.

ಶ್ರೀ ಸಿ ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ಎಲ್ಲಾ ಒಂದೇ. ಕರ್ನಾಟಕ ರಾಜ್ಯದ ವಿಚಾರದಲ್ಲಿ ಶ್ರದ್ಧೆವಹಿಸತಕ್ಕಂಥಾದ್ದರಲ್ಲಿ ರಾಜ್ಯ ಎಲ್ಲಾ ಒಂದೇ ಎಂದು ನಾನು ಭಾವಿಸುತ್ತೇನೆ. ಆದರೆ, ಮಾನ್ಯ ತಿಮ್ಮಪ್ಪನವರು ಹೊಳೆನರಸೀಪುರಕ್ಕೆ ನೇರವಾಗಿ ಹೋಗುತ್ತಿದ್ದಾರೆ. ನೀವು ಅಲ್ಲಿಗೆ ಹೋದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಅವರು ಹೊಳೆನರಸೀಪುರಕ್ಕೂ ಹೋಗಬಹುದು, ಅಥವಾ ಸೊರಬಕ್ಕೂ ಹೋಗಬಹುದು, ಎಲ್ಲಿ ಬೇಕಾದರೂ ಹೋಗಬಹುದು, ಅದಕ್ಕೆ ಅವರಿಗೆ ಅಧಿಕಾರ ಇದೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಇದರಲ್ಲಿ ಲೈಸನ್ಸ್‌ನ್ನು ರದ್ದುಪಡಿಸಬೇಕೆಂದು ಸಲಹೆ ಮಾಡಿದ್ದಾರೆ. ಅದಕ್ಕೆ ಸಿಬಿಐ ಎನ್‌ಕ್ವೈರಿ ಅವಶ್ಯಕತೆ ಇದೆಯಾ? ಇನ್ನೊಂದು ಡೈರೆಕ್ಟರ್ ಆಫ್ ಸೆಂಟ್ರಲ್ ಸ್ಕ್ವೋರ್ ಇದೆಯಲ್ಲಾ? ಅವರ ಮೇಲೂ ಕ್ರಮ ಕೈಗೊಳ್ಳಬೇಕೆಂದು ಹೇಳಲಾಗಿದೆ.

ಅಧ್ಯಕ್ಷರು : ನಿಮ್ಮ ಮಾತಿನ ಅರ್ಥ, I have got to be very very careful. Once again I am afraid of the press. ಸಿ ಬಿ ಐ ಅನ್ನು ಬಹಳ ಗ್ಲೋರಿಫೈ ಮಾಡಿಬಿಡುತ್ತಿದ್ದೀರಿ, ಎಲ್ಲೋ ಒಂದು ಕಡೆ. ಒಂದು ತರಹ unwittingly ಬಹಳ ಗ್ಲೋರಿಫೈ ಮಾಡುತ್ತಿದ್ದೀರಿ. It is not a good sign. ಮೊನ್ನೆ ಮಾನ್ಯ ನಂಜೇಗೌಡರು ಮಾತನಾಡುವಾಗ, ಜ್ಯುಡಿಷಯರಿಯಲ್ಲಿ ಪೊಲಿಟಿಕಲ್ ಸಿಸ್ಪಂನಲ್ಲಿ, ಎಕ್ಸಿಕ್ಯುಟಿವ್‌ನಲ್ಲಿ ಮತ್ತು ಎಲ್ಲಾ ಕಡೆ ಇರತಕ್ಕಂಥ ಡ್ರಾ ಬ್ಯಾಕ್ಸ್‌ನ್ನು ಡಿಫೆಷಿಯನ್ಸಿಯನ್ನು ಬಹಳ ಕ್ಲಿಯರ್ ಕಟ್ ಆಗಿ ಪಾಯಿಂಟ್ ಔಟ್ ಮಾಡಿದ್ದಾರೆ. ನಮ್ಮ ಅಡ್ವಾಂಟೇಜ್‌ಗೆ ಮತ್ತು ಡಿಸ್‌ಅಡ್ವಾಂಟೇಜ್‌ಗೆ ಯಾವುದೋ ಒಂದು ಸಂಸ್ಥೆಯನ್ನು ಈಡು ಮಾಡತಕ್ಕಂಥಾದ್ದಲ್ಲ, ಡಿಫೆನ್ಸ್‌ಗೂ ಕೂಡ ಇದು ರಿಫ್ಲೆಕ್ಟ್ ಆಗುತ್ತದೆ. ಅದು ಎಲ್ಲರಿಗೂ ಗೊತ್ತಿದೆ. Infact, it may not be out of context, ಮಾನ್ಯ ಜಾಲಪ್ಪನವರನ್ನು ಒಂದು ವಿಚಾರದಲ್ಲಿ ರೆಫರ್ ಮಾಡಿಸಿದಾಗ, ನಾನು ಒಂದು ದಿವಸ ರಾತ್ರಿ ಅವರ ಮನೆಗೆ ಹೋಗಿ ನೋಡಿ ನನಗೆ ಭಯ ಆಗಿ ಹೋಯಿತು. ಜಾಲಪ್ಪನವರು, ಈ ವಿಚಾರಣೆ ಪೂರ್ತಿ ಆಗುವವರೆಗೂ ಉಳಿಯುತ್ತಾರಾ ಇಲ್ಲವೋ ಎನ್ನುವ ಭಯ ಬಂದುಬಿಟ್ಟಿತ್ತು. ಅವರು ಅಪರಾಧಿಯೋ ಅಲ್ಲವೋ ಅದು ಬೇರೆ ಪ್ರಶ್ನೆ. ಆ ವಿಚಾರಣೆ ಮಾಡತಕ್ಕಂಥ ನಮೂನೆ ಇದೆಯಲ್ಲಾ, ಆವಾಗ! ಅವರು

ನಮ್ಮ ಹತ್ತಿರ ಖಾಸಗಿಯಾಗಿ ಹೇಳಿದ್ದು ಕೂಡ It is a politically motivated. It is only to fix me somebody has done ಎಂದು. ಈಗ ನಾನು ಹೇಳುವುದು, the trend is not good. ಈಗ ನಮ್ಮ ಸಮಯವನ್ನು ಅದರ ಚರ್ಚೆಗೆ ಇಟ್ಟುಕೊಳ್ಳಬೇಕೇ? ಬೇಡವೇ, ಆಮೇಲೆ ಅದೂ ಸಿಬಿಐ ಗೆ ಹಾಕಿಸಿ ಇದೂ ಸಿ ಬಿ ಐ ಗೆ ಹಾಕಿಸಿ, ಅಲ್ಲಿ ಏನು ದೇವಾನ ದೇವತೆಗಳು ಬಂದಿಲ್ಲ, ಸಿ ಬಿ ಐ ನಲ್ಲೂ ನಮ್ಮಂಥ ನರ ಮನುಷ್ಯರೇ ಇರತಕ್ಕಂಥಾದ್ದು, ಜ್ಯುಡಿಷಿಯರಿಯಲ್ಲೇ ಲೋಪ ದೋಷಗಳು ಇರುವುದಾದರೆ, ಸಿ ಬಿ ಐ ನಲ್ಲಿ ಇರುವುದಲ್ಲವೋ? ನಮ್ಮಲ್ಲಿ ಇರುವುದಿಲ್ಲವೋ? ಇರುತ್ತವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದರಲ್ಲಿ ಪೊಲಿಟಿಕಲಿ ಮೊಟಿವೇಟೆಡ್ ಇದೆ ಎನ್ನುವುದನ್ನು ನಾವು ಒಪ್ಪಿಕೊಳ್ಳುತ್ತೇವೆ. This reference is made politically motivated ಫೇರ್ ಆಗಿ ಮಾಡಿದ್ದರೆ, ಆಗಬಹುದು.

ಅಧ್ಯಕ್ಷರು : ನಾನು ಏನು ಹೇಳುತ್ತೇನೆಂದರೆ ತಾವು, ಸನ್ಮಾನ್ಯ ವಿರೋಧ ಪಕ್ಷದಲ್ಲಿರತಕ್ಕಂಥ ಸದಸ್ಯರುಗಳು ತಮ್ಮ ಭಾವನೆ ವ್ಯಕ್ತಪಡಿಸತಕ್ಕಂಥ ಸರ್ವ ಸ್ವಾತಂತ್ರ್ಯ ತಮಗೆ ಇದೆ. ತಾವು ಯಾವ ಅಭಿಪ್ರಾಯವನ್ನು ಬೇಕಾದರೂ ವ್ಯಕ್ತಪಡಿಸಬಹುದು. That remain on record. I will not come in your way. ನಾನು ಮಾಡಿದ ರಿಮಾರ್ಕ್ಸ್ ಏನೆಂದರೆ it is of general nature not referring to this point.

ಶ್ರೀ ವಾಟಾಳ್ ನಾಗರಾಜ್: ನಿಮ್ಮ ಅಭಿಪ್ರಾಯವನ್ನು ನಾವು ಸಮರ್ಥನೆ ಮಾಡುತ್ತೇವೆ. ಅದಕ್ಕೆ ಏಕೆ ಇಷ್ಟು ಮಾನ್ಯತೆ? ಆದರೆ, ಇದನ್ನು ತರಾತುರಿಯಲ್ಲಿ ತಂದು ಏಕೆ ಮಾಡಬೇಕು?

ಅಧ್ಯಕ್ಷರು : ಬೈರೇಗೌಡರು ಏನು ಹೇಳುತ್ತಾರೆಂದರೆ ಅದನ್ನು ನಾವು ಪ್ರಸ್ತಾಪ ಮಾಡಿದ್ದಲ್ಲ, ಸದನದಲ್ಲಿ ಕಲಾಪ ನಡೆಯುವ ಸನ್ನಿವೇಶದಲ್ಲಿ ಒಬ್ಬರು ಸದಸ್ಯರು ಅದನ್ನು ಪ್ರಸ್ತಾಪ ಮಾಡಿದರು, ಅವರು ಯಾರನ್ನು ರಕ್ಷಣೆ ಮಾಡುವುದಕ್ಕೆ ಇವೆಲ್ಲಾ ಮಾಡುತ್ತಿದ್ದೀರಿ ಎಂದು ಕೇಳಿದ್ದಕ್ಕೆ.

ಶ್ರೀ ವಾಟಾಳ್ ನಾಗರಾಜ್ : ಅದರ ಹಿಂದೆ ರಾಜಕೀಯ ಇದೆ ಎಂದು ನಾವು ಹೇಳಿದ್ದುದು.

ಶ್ರೀ ಸಿ. ಬೈರೇಗೌಡ : ಅವರು ಆ ಕಡೆ ಕುಳಿತಿದ್ದಾರೆ. ನಾವು ಏನು ಮಾಡಿದರೂ ಅದಕ್ಕೆ ಎಷ್ಟೆಷ್ಟು ಮುಖ ಇದೆ ಎಂದು ಹೇಳಬೇಕಾಗಿರತಕ್ಕಂಥಾದ್ದು ಅವರ ಕರ್ತವ್ಯ. ಅವರ ಕರ್ತವ್ಯವನ್ನು ಅವರು ಮಾಡುತ್ತಿದ್ದಾರೆ. ಸರ್ಕಾರ ತೀರ್ಮಾನ ಏನು ಎಂಬುದನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ತಿಳಿಸಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಬೇರೈಗೌಡರು ಇಲ್ಲಿ ಕುಳಿತಿದ್ದಾಗಲೂ ಅನೇಕ ವ್ಯಾಖ್ಯಾನಗಳನ್ನು ಮಾಡಿದ್ದಾರೆ. ಈ ವರದಿ ಬಗ್ಗೆ ಕೂಡ ಮಾತನಾಡಿದ್ದಾರೆ.

ಶ್ರೀ ಸಿ. ಬೈರೇಗೌಡ : ಇಲ್ಲ ಎಂದು ಯಾರು ಹೇಳಿದರು?

ಶ್ರೀ ಕೆ. ಎಸ್. ಈಶ್ವರಪ್ಪ : ಇದನ್ನು ಯಾರೋ ಒಬ್ಬರು ಸದಸ್ಯರು ಪ್ರಸ್ತಾಪ ಮಾಡಿದರು,

ಇದಕ್ಕೋಸ್ಕರ ನಾನು ಹೇಳಿದ್ದುದು, ಶ್ರೀಮತಿ ಪ್ರಮೀಳಾ ನೇಸರ್ಗಿಯವರು, 25 ಕೋಟಿ ರೂಪಾಯಿಗಳನ್ನು ಮಕ್ಕಳ ದುಡ್ಡನ್ನು ತಿಂದು ಪಿಟ್ಟಿದ್ದಾರೆಂದು ಪ್ರಸ್ತಾಪ ಮಾಡಿದರು, ಅದನ್ನು ಯಾರಾದರೂ ಒಬ್ಬರು ಸದಸ್ಯರು ತಂದರೆ ಅದನ್ನೂ ಸಿ.ಬಿ.ಐ.ಗೆ ಹಾಕುತ್ತೀರೋ? ಅದೇ ರೀತಿ ಗ್ರಾನೈಟ್ ಕಮಿಟಿ ರಿಪೋರ್ಟ್ ಬಗ್ಗೆ ನಾನು ಪ್ರಸ್ತಾಪ ಮಾಡಿದೆ, ಅದನ್ನು ಯಾರಾದರೂ ಸದಸ್ಯರು ತಂದರೆ ಅದನ್ನೂ ಸಿ.ಬಿ.ಐ.ಗೆ ಹಾಕುತ್ತೀರೋ? ಸರ್ಕಾರಕ್ಕೆ ಇದರಲ್ಲಿ ಆಸಕ್ತನೇ ಇಲ್ಲ. ಯಾರೋ ಸದಸ್ಯರು ತಂದಿದ್ದಕ್ಕೋಸ್ಕರ ಅದನ್ನು ಮಾಡಿದ್ದಾರೆ.. ಕೋಟಿಗಟ್ಟಲೆ ಲೂಟಿ ಆಗಿರುವ ಬಗ್ಗೆ ಸದನದ ಕಮಿಟಿಗಳ ವರದಿಯಲ್ಲಿ ಪ್ರಸ್ತಾಪ ಮಾಡಿದಾದಂಥ ವಿಷಯಗಳಿರುವಾಗ ಅದನ್ನು ಯಾರಾದರೂ ಸದಸ್ಯರುಗಳು ಪ್ರಸ್ತಾಪ ಮಾಡಿದ್ದರೆ ಅದನ್ನೂ ಸಿ ಬಿ ಐ ಗೆ ಹಾಕುತ್ತೀರೋ?

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೆ ತರುವಂಥ ಒಂದು ವಿಚಾರ ಏನೆಂದರೆ, ರಾಜಕಾರಣವನ್ನು ಏನಾದರೂ ಬಳಸಿಕೊಳ್ಳಲಿ, ಅದಕ್ಕೂ ನಮಗೂ ಸಂಬಂಧವಿಲ್ಲ. ಕೊಲೆ ಪ್ರಕರಣಗಳು ಆಗಿರುವಂಥ ವಿಚಾರದಲ್ಲಿ, ಸದಸ್ಯರುಗಳು ಅವರ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಚಾರದಲ್ಲಿ ಸಿ.ಓ.ಡಿ ತನಿಖೆ ಮಾಡಿಸಬೇಕೆಂದು ಒತ್ತಾಯ ಮಾಡಿದರೂ ಸಹ ಅವರು ಸಿ.ಓ.ಡಿ ತನಿಖೆಗೆ ಕೊಟ್ಟಿಲ್ಲ. ಒಂದು ಪಕ್ಷ ಸಿ.ಓ.ಡಿ ತನಿಖೆಗೆ ಕೊಡುವುದಕ್ಕೆ ಸಾಧ್ಯವಿಲ್ಲವೆಂದರೂ ಸಿ ಬಿ ಐ ಗೆ ವಹಿಸಿಕೊಡಿ ಎಂದು ಒತ್ತಾಯ ಮಾಡಿದರೂ ಸಹಿತ ಅವರು ಅದಕ್ಕೆ ಒಪ್ಪಲಿಲ್ಲ. ಹಾಗಾದರೆ ಇದು ಉದ್ದೇಶಪೂರ್ವಕವಾಗಿ ಸಿ ಬಿ ಐ ಗೆ ಒಪ್ಪಿಸುವಂಥ ಪ್ರಯತ್ನ ನಡೆದಿದೆಯೋ ಅಲ್ಲವೋ ಎನ್ನುವುದರ ಬಗ್ಗೆ ತಾವು ನಿರ್ಣಯ ಮಾಡಬೇಕಾಗಿದೆ.

ಶ್ರೀ ಎಂ. ಪಿ. ಪ್ರಕಾಶ : ಸನ್ಮಾನ್ಯ ಅಧ್ಯಕ್ಷರೆ, ಇಲ್ಲಿಯವರೆಗೂ ಆಗಿರತಕ್ಕಂಥ ಚರ್ಚೆಯ ಒಟ್ಟು ಫಲಪ್ರದದ ಪ್ರಕಾರ, ಉದ್ದೇಶ ಪೂರ್ವಕವಾಗಿ ಈ ಒಂದು ಆಜ್ಞೆಯನ್ನು ಮಾಡಿದ್ದೀರಿ, ಆದರೆ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುವ ವಿಚಾರದಲ್ಲಿ ನಮಗೆ ಭಿನ್ನಾಭಿಪ್ರಾಯ ಇಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಸದನದಲ್ಲಿ ಪ್ರಸ್ತಾಪಿಸಲ್ಪಟ್ಟ ವಿಷಯಕ್ಕೆ ಸರಿಯಾದ ರೀತಿಯಲ್ಲಿ ನಾವು ಪ್ರತಿಕ್ರಿಯೆ ತೋರಿಸಿದ್ದೇವೆ. ಅದಕ್ಕಾಗಿ ಅವರು ನಮಗೆ ವಂದಿಸಬೇಕಾಗುತ್ತದೆ. ಅದರಲ್ಲೂ ಕೂಡ ರಾಜಕಾರಣ ಮಾಡಲಾಗಿದೆಯೆಂದು ಅವರು ಹೇಳಿದ್ದಾರೆ. ಅವರ ತರ್ಕಕ್ಕಾಗಿ ಇದನ್ನು ಒಪ್ಪುವುದಾದರೆ, ಬೇರೆ ಬೇರೆ ಸದನ ಸಮಿತಿಗಳಿಗೆ ಸಂಬಂಧಿಸಿದಂತೆ ಇದೇ ನಿಲುವನ್ನು ಪ್ರಸ್ತಾಪ ಮಾಡಿ ಎಂದು ಅವರು ಹೇಳುತ್ತಾರೆ. ಸನ್ಮಾನ್ಯ ಅಧ್ಯಕ್ಷರೆ, ನಾವು ಇಷ್ಟು ಮಾತ್ರ ಹೇಳುತ್ತೇವೆ. ಬೇರೆ ಬೇರೆ ಸದನದ ಸಮಿತಿಗಳು ಕೊಟ್ಟಿರತಕ್ಕಂಥ ವರದಿಗಳನ್ನು ನೋಡಿ ಅವುಗಳ ಗುಣಾವಗುಣಗಳ ಮೇಲೆ ನಾವು ಖಂಡಿತವಾಗಿ ಕ್ರಮ ಕೈಗೊಳ್ಳುತ್ತೇವೆ. ಯಾವುದರ ಬಗ್ಗೆಯೂ ಕೂಡ ನಾವು ಹಿಂಜರಿಯುವ ಪ್ರಶ್ನೆ ಇಲ್ಲ.

5.00 ಪಿ.ಎಂ

(ಗೊಂದಲ)

ಶ್ರೀಮತಿ ಪ್ರಮೀಳಾ ನೇಸರ್ಗಿ : ಗುಣಾವಗುಣಗಳು ಅಂದರೇ ಏನು?... ಮಾಡಿಕೊಂಡು ಹೇಳಿ... ತಾವು ಮತ್ತು ಬೈರೇಗೌಡರು ಸತ್ಯವನ್ನು ಇಲ್ಲಿ ಹೇಳಿ.. ಸತ್ಯವನ್ನು ಮುಚ್ಚಬೇಡಿ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ವಿರೋಧ ಪಕ್ಷದ ನಾಯಕರುಗಳು ಮತ್ತು ಮಾನ್ಯ ಸದಸ್ಯರುಗಳು ಏನೆಲ್ಲಾ ಹೇಳಬೇಕೋ ಅದನ್ನು ಹೇಳುವ ಹಕ್ಕನ್ನು ಪಡೆದಿದ್ದಾರೆ. ಆದರೆ ತೀರ್ಮಾನ ತೆಗೆದುಕೊಳ್ಳಲು ನಮಗೆ ಆದೇಶ ಕೊಟ್ಟಿರುವುದರಿಂದ ನಾವು ತೀರ್ಮಾನವನ್ನು ಸಕಾಲದಲ್ಲಿ ತೆಗೆದುಕೊಳ್ಳುತ್ತೇವೆ. ಮಾನ್ಯ ಜಯರಾಂ ರವರ ವಿಚಾರದಲ್ಲಿ ಸದನ ಸಮಿತಿ ಮತ್ತು ಬೇರೆ ಬೇರೆ ವಿಚಾರದಲ್ಲಿ ಏನು ವರದಿ ಕೊಟ್ಟಿದ್ದೀರಿ ಅದನ್ನು ಖಂಡಿತವಾಗಿ ಅತ್ಯಂತ ಗಂಭೀರವಾಗಿ ಪರಿಶೀಲಿಸುತ್ತೇವೆ ಅದರ ಮೇಲೆ ಯಾವ ಸೂಕ್ತ ಕ್ರಮವನ್ನು ಕೈಗೊಳ್ಳ ಬೇಕೋ ಅದನ್ನು ಸೂಕ್ತವಾಗಿ ಕೈಗೊಳ್ಳುತ್ತೇವೆ.

ಶ್ರೀ ಅರಗಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖಾ ಸಮಿತಿಯ ವರದಿಯ ಮೇಲೆ ಯಾವ ಒಂದು ಅಧಿಕಾರಿಯನ್ನು ನೇಮಕ ಮಾಡಿದ್ದೀರಿ ಅದು ಸದನದ ಹಕ್ಕುಚ್ಯುತಿಯ ಪ್ರಶ್ನೆಯಾಗುತ್ತದೆ. ಸಮಿತಿಯು ರಿಪೋರ್ಟ್‌ನ್ನು ಕೊಟ್ಟ ನಂತರ ಅದಕ್ಕೆ ಒಬ್ಬ ಅಧಿಕಾರಿಯನ್ನು ನೇಮಕ ಮಾಡಲು ಬರುತ್ತದೆಯೇ? ಇದು ಸದನದ ಹಕ್ಕುಚ್ಯುತಿಯ ಪ್ರಶ್ನೆ...

ಶ್ರೀ ಎಂ. ಶ್ರೀನಿವಾಸ್ : ನಾನೂ ಕೂಡ 4 ಕೋಟಿ ರೂಪಾಯಿಗಳ ಒಂದು ಬಿಲ್ಲಿನ ವಿಚಾರವನ್ನು ಹೇಳುತ್ತೇನೆ. ನಿಮ್ಮ ಸರಕಾರ ಒಳ್ಳೆಯ ಸರಕಾರ. ಅದನ್ನೂ ಸಿ.ಬಿ.ಐ.ಗೆ ಕಳುಹಿಸುತ್ತೀರೋ?

ಉಪಾಧ್ಯಕ್ಷರು : ತಾವುಗಳು ತಮ್ಮಲ್ಲಿನ ಮಾಹಿತಿಗಳನ್ನು ಕಳುಹಿಸಿಕೊಂಡಿ...

ಶ್ರೀ ಸಿ. ಭೈರೇಗೌಡ : ರಿಪೋರ್ಟ್‌ಗಳು...

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ನಾವು ಬೈರೇಗೌಡರಿಂದ ಈ ಮಾತನ್ನು ನಿರೀಕ್ಷೆ ಮಾಡಿಲ್ಲ. ಒಂದು ಕಾಲದಲ್ಲಿ ವಿರೋಧಪಕ್ಷದ ಸ್ಥಾನದಲ್ಲಿ ಕುಳಿತು ದಿನದ ಕಾರ್ಯಕಲಾಪಗಳ ವೇಳೆಯಲ್ಲಿನ ಬಹುಭಾಗವನ್ನು ಚರ್ಚೆ ಮಾಡುವಲ್ಲಿ ಕಳೆಯುತ್ತಿದ್ದ ಬೈರೇಗೌಡರಿಂದ ಈ ನಿರೀಕ್ಷೆಯನ್ನು ನಾವು ಮಾಡಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಇದನ್ನು ನಿಮ್ಮ ಮೇಲೆ ಬಿಡುತ್ತೇವೆ. ಏಕೆಂದರೆ ತಾವುಗಳು ಇಲ್ಲಿದ್ದಾಗಲೇ ಅದನ್ನು ಅವರು ಹೇಳಿದರು. ಅದರ ಮೆರಿಟ್ಸ್-ಡಿಮೆರಿಟ್ಸ್ ನೋಡಿಕೊಂಡು ನಾವು ಮತ್ತು ಮಾನ್ಯ ನಂಜೇಗೌಡರೂ ಕೂಡ ಮಾತನಾಡಿದ್ದೇವೆ. ಅದನ್ನು ಯಾವ ರೀತಿಯಾಗಿ ಬಗೆಹರಿಸಬೇಕೆಂಬ ಬಗ್ಗೆ ನೋಡೋಣ. ಅದಕ್ಕಾಗಿ ತಮ್ಮ ಮೇಲೆ ಬಿಟ್ಟಿದ್ದೇವೆ, ಅದನ್ನು ತಾವು ಯಾವ ರೀತಿಯಾಗಿ ಚರ್ಚೆ ಮಾಡಿ...

MR. SPEAKER : I will assure the House that I will immediately rectify the position to what I said earlier. ಮಾನ್ಯ ಶಿವಕುಮಾರರವರು ಆ ರೀತಿಯಾಗಿ ಹೇಳಿದ್ದರೇ, ಒಂದು ವೇಳೆ ಆ ರೀತಿಯಾಗಿ ಹೇಳಿದ್ದರೆ ಅದನ್ನೇ ರೆಕ್ಟಿಫೈ ಮಾಡತಕ್ಕಂಥಾದ್ದು...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆ ಎಲ್ಲಾ ಕಡತವೂ ಇರಲಿ. ಹಾಗೆಯೇ ಮೆರಿಟ್ ಮತ್ತು ಡಿಮೆರಿಟ್ಸ್ ಗಳನ್ನೆಲ್ಲಾ ವಿಚಾರ ಮಾಡಿ ಇದನ್ನು ಯಾವರೀತಿಯಾಗಿ ಮಾಡಬೇಕು ಮತ್ತು ಇದು

ಪೊಲಿಟಿಕಲೀ ಮೋಟಿವೇಟೆಡ್ ಆಗಬಾರದು ಎನ್ನುವುದು ಒಂದಾದರೆ ಇಡೀ ಸದನವೇ ಅದಕ್ಕೆ ಪಾರ್ಟಿ ಇದೆ ಎಂಬ ಅಭಿಪ್ರಾಯವೂ ಅದಕ್ಕೆ ಬರಬಾರದು ಎಂಬುದು ಎರಡನೇಯದು. ಮೂರನೇದಾಗಿ, ನಾವಲ್ಲರೂ ಸೇರಿ ಅದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದೇವೆ ಎಂಬ ರೀತಿಯಲ್ಲಿ ಅದು ತಮ್ಮ ಅಧ್ಯಕ್ಷತೆಯಲ್ಲಿ ನಡೆಯಬಾರದು. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಯವರು ಬಂದಮೇಲೆ ಒಂದು ವಿಚಾರ ವಿನಿಮಯ ಮಾಡಿ ಒಂದು ತೀರ್ಮಾನವನ್ನು ತೆಗೆದುಕೊಳ್ಳತಕ್ಕಂಥಾದ್ದು ಸೂಕ್ತ ಎಂಬ ಸಲಹೆಯನ್ನು ನಾನು ಕೊಡಬಯಸುತ್ತೇನೆ. ಗ್ರಾನೈಟ್ ಬಗ್ಗೆ ತಾವುಗಳು ನಾಳೆ ಎಷ್ಟು ಗಂಟೆಗೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೀರಿ ಎಂಬ ಬಗ್ಗೆ ದಯಮಾಡಿ ಹೇಳಬೇಕು.

ಅಧ್ಯಕ್ಷರು : ನಾಳೆ ನನಗೆ ಗೊತ್ತಿರುವ ಹಾಗೆ we cannot take up any other matter except Chief Minister's reply tomorrow.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮುಖ್ಯಮಂತ್ರಿಯವರು ಬೇಕಾದರೆ ಮಧ್ಯಾಹ್ನ ರಿಪ್ಲೈ ಮಾಡಲಿ. ಬೆಳಿಗ್ಗೆ ಯಾವಾಗಲಾದರೂ ಒಂದು ಅಥವಾ ಅರ್ಧ ಗಂಟೆಯ ಸಮಯ ಕೊಟ್ಟರೆ ಸಾಕು. 205 ಪ್ರಕಾರ ಸ್ಪೆಷಲ್ ಕಾಂಪೋನೆಂಟ್ ಪ್ಲಾನ್‌ನ್ನು ರಿ-ಅಲೋಕೇಟ್ ಮಾಡಿದ್ದು ಸರಿ ಅಲ್ಲ. ಇದನ್ನು ಹೊರಗಡೆ ಒಪ್ಪುತ್ತೇನೆ, ಒಳಗೆ ಒಪ್ಪಲು ಆಗುವುದಿಲ್ಲ ಎಂದು ಅವರು ಹೇಳುತ್ತಾರೆ...

ಶ್ರೀ ವೈ. ರಾಮಕೃಷ್ಣ : ಯಾರು ಹಾಗೆಂದು ಹೇಳಿದ್ದುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾಣಯ್ಯನವರು ...

SRI M.C. NANAIAH : Sir, this is a mis statement. Probably, I never got the opportunity to speak to Mr. Kharge. I don't know whether you got it in your dream.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ರಾಮಕೃಷ್ಣನವರು ಕೂಡ ಇಲ್ಲಿಯೇ ಇದ್ದಾರೆ.

SRI M.C. NANAIAH : I never spoke with him yesterday.

ಶ್ರೀ ಹೆಚ್.ಎನ್. ನಂಜೇಗೌಡ : ಒಂದು ವೇಳೆ ಇನ್ ಗುಡ್ ಫೈತ್ ಹೊರಗೆ ಅವರು ಏನಾದರೂ ಹಾಗೆ ಮಾತನಾಡಿದ್ದರೆ you have to treat it as confidential even if has disclosed it. You have to treat it as off the record. ಅವರು ಮಾತನಾಡಿದ್ದರೂ ಇಲ್ಲಿ ಹೇಳಬಾರದು.

MR. SPEAKER : This is more incriminatory.

ಶ್ರೀ ಎಂ. ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, even the dreams have got the responsibilities, according to a renowned poet Keats. ಒಂದು ವೇಳೆ ಅದು ಕನಸಿನಲ್ಲಿದ್ದರೂ ಕೂಡ ಆ ಒಂದು ಜವಾಬ್ದಾರಿ ಇರುತ್ತದೆ. ಆ ಹಿನ್ನೆಲೆಯಲ್ಲಿ ಜವಾಬ್ದಾರಿಯಿಂದ ಹೇಳಬೇಕು. A poet

has called it even dreams have responsibilities. ಈಗಾಗಲೇ ಮಾನ್ಯ ಉಪಾಧ್ಯಕ್ಷರು ಸದನದಲ್ಲಿ ನಿಯಮ 205ರ ಬಗ್ಗೆ ನಿರ್ಣಯವನ್ನು ಕೊಟ್ಟಿದ್ದಾರೆ. ಆದ್ದರಿಂದ ಅದನ್ನು ಮತ್ತೆ ಇಲ್ಲಿ ಪ್ರಸ್ತಾಪ ಮಾಡಬೇಕಾದ ಅವಶ್ಯಕತೆ ಇಲ್ಲ. ಆದರೆ ಕಾನ್ಸ್‌ಟ್ಯೂಷನಲ್ ಪ್ರಾಪ್ರೈಟಿ ವಿಚಾರದಲ್ಲಿ ಏನು ನಿರ್ಣಯ ಆಗುತ್ತದೆ ಅದು ಆಗುತ್ತದೆ.

ಶ್ರೀ ಪಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಒಂದು ದಿನವನ್ನು ಗ್ರಾನೈಟ್ ಗೋಷ್ಕರ ತಾವು ಅವಕಾಶ ಮಾಡಿಕೊಡಬೇಕು. ನಾಳೆ ಮಾನ್ಯ ಮುಖ್ಯಮಂತ್ರಿಯವರ ಉತ್ತರವಾಗಲಿ. ಆನಂತರ ನಾಡಿದ್ದು ಗ್ರಾನೈಟ್ ಬಗ್ಗೆ ಸುದೀರ್ಘವಾದ ಚರ್ಚೆಯಾಗಲಿ. ಇದು ಬಹಳ ಪ್ರಮುಖವಾದ ವಿಚಾರ.

ಅಧ್ಯಕ್ಷರು : ನನಗೂ ಸದನ ನಡೆಯುತ್ತಾ ಇದ್ದರೆ ನಾನು ಇಲ್ಲ ಬಂದು ಕುಳಿತುಕೊಳ್ಳಬಹುದು. ಸದನ ಇಲ್ಲದಿದ್ದರೆ ನಾನು ಎಲ್ಲಿ ಹೋಗಿ ಕುಳಿತುಕೊಳ್ಳಲಿ? ನನ್ನನ್ನು ಯಾರು ನೋಡುತ್ತಾರೆ?.. ನನಗೇನೂ ಸದನ ನಡೆಯಲಿ ಎಂದು ಆಸೆನೇ... ನೀವೆಲ್ಲರೂ ಒಪ್ಪಿಕೊಳ್ಳಬೇಕಲ್ಲಾ?

ಶ್ರೀ ಪಾಟಾಳ್ ನಾಗರಾಜ್ : ಈ ವಿಚಾರವು ತಮಗೆ ಬಿಟ್ಟಿದ್ದುದು. ತಾವುಗಳು ಯಾವಾಗ ಬೇಕಾದರೂ ಕರೆಯಬಹುದು.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಇನ್ನೂ ಒಂದು ದಿನ ಸದನವನ್ನು ಮುಂದೂಡಿದರೆ ತುಂಬಾ ಅನುಕೂಲವಾಗಬಹುದು. ಇಲ್ಲಿ ಅಂದರೆ, ಗ್ರಾನೈಟ್ ಇಡೀ ರಾಜ್ಯದಲ್ಲಿ ಲೂಟಿಯಾಗುತ್ತಾ ಇದೆ.

ಅಧ್ಯಕ್ಷರು : ಆ ವಿಚಾರದಲ್ಲಿ ನಾನು ಆರ್ಬಿಟ್ರರಿಯಾಗಿ ಹೇಳುವುದಕ್ಕೆ ಬರುವುದಿಲ್ಲ. ಸಲಹೆ ಇದೆ. ಸರಕಾರದವರು ನಾಳೆ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರೆ. ಈಗ ಗಮನಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹಾಗಾದರೆ ನಾಳೆ ಗ್ರಾನೈಟ್ ವಿಚಾರವನ್ನು ತೆಗದು ಕೊಳ್ಳೋಣವಲ್ಲವೆ?

ಅಧ್ಯಕ್ಷರು : ಸರಕಾರದ ಪರವಾಗಿ ಅವರು ಹೇಳುತ್ತಾರೆ.

SRI M.C. NANAIAH : We can discuss tomorrow. At what time it should be taken, we can meet in the speaker's chambers and then we will take a decision.

ಗಮನ ಸೆಳೆಯುವ ಸೂಚನೆ

ಮೈಸೂರಿನ ಸೇಂಟ್ ಫಿಲೋಮಿನಾ ಚರ್ಚ್‌ನ ಹೊನಲು ಬೆಳಕು ವ್ಯವಸ್ಥೆ

ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ) : ಸನ್ಮಾನ್ಯ ಅಧ್ಯಕ್ಷರೇ, ಮೈಸೂರಿನಲ್ಲಿರುವ ಸೇಂಟ್ ಫಿಲೋಮಿನಾ ಚರ್ಚಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಕಲ್ಪಿಸಲಾಗಿರುವ ಹೊನಲು